# ಗ್ರಾಮ ಪಂಚಾಯತಿಯ ಸದಸ್ಯರಿಗೆ ಅಭಿವೃದ್ಧಿ ಮುನ್ನೋಟ ಸಿದ್ಧಪಡಿಸುವ ಕುರಿತು ಉಪಗ್ರಹ ಆಧಾರಿತ ತರಬೇತಿಗೆ – ವಿನ್ಯಾಸ ಸಿದ್ಧಪಡಿಸಲು ನಡೆಸಿದ ಪೂರ್ವಭಾವಿ ಕ್ಷೇತ್ರಕಾರ್ಯದ ಅಧ್ಯಯನ

– ಎಂ.ಸಿ.ಶೈಲಜ *

## 1. ಪೀಠಿಕೆ :

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿ ಸದಸ್ಯರಿಗೆ ಕಳೆದ 4 ವರ್ಷಗಳಿಂದ ನೀಡುತ್ತಿರುವ ಮೂಲಕ ಗ್ರಾಮ ಪಂಚಾಯತ್ ಸದಸ್ಯರ ಸಾಮಾರ್ಥ್ಯವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪಾಮಾಣಿಕ ಪ್ರಯತ್ನ ನಡೆಸಿದೆ. ಪ್ರಸ್ತುತ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೂರನೆಯ ಅವಧಿಗೆ ಆಯ್ಕೆಯಾದ ಸುಮಾರು 90,452 ನೂತನ ಗ್ರಾಮ ಪಂಚಾಯತಿ ಸದಸ್ಯರಿಗೆ ಒಟ್ಟು 11 ದಿನಗಳ ತರಬೇತಿ ಕಾರ್ಯಕ್ರಮವನ್ನು ನಾಲ್ಕು ಹಂತಗಳಲ್ಲಿ ನೀಡಲು ಸಂಸ್ಥೆಯವತಿಯಿಂದ ಆಯೋಜಿಸಲಾಗಿದೆ. ಈಗಾಗಲೇ ಮೊದಲನೇ ಹಂತದ 2 ದಿನಗಳ ಪರಿಚಯಾತ್ಮಕ ತರಬೇತಿಯನ್ನು ಏಪ್ರಿಲ್ 05ರಿಂದ ಜೂನ್ 05ರ ಅವಧಿಯಲ್ಲಿ ನೀಡಿದ್ದು, ಅಂದಾಜು 80%ರಷ್ಟು ಸದಸ್ಯರು ಅದರ ಪ್ರಯೋಜನವನ್ನು ಪಡೆದಿರುತ್ತಾರೆ. ಈ ಹಂತದಲ್ಲಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಈ ಕೆಳಗಿನ ವಿಷಯಗಳ ಕುರಿತು ಚರ್ಚಿಸಲಾಗಿದೆ.

1. ವಿಕೇಂದ್ರಿಕರಣ
2. ವಿಕೇಂದ್ರಿಕರಣದ ತತ್ವಗಳು
3. 73ನೇ ತಿದ್ದುಪಡಿಯ ಮುಖ್ಯಾಂಶಗಳು
4. ಕರ್ನಾಟಕದಲ್ಲಿ ರೂಪಿಸಿದ ಪಂಚಾಯತ್ ರಾಜ್ ಕಾಯ್ದೆ 1993ರ ಮುಖ್ಯಾಂಶಗಳು
5. ಗ್ರಾಮ ಪಂಚಾಯತಿಯಲ್ಲಿ ಉತ್ತುಮ ಆಡಳಿತ ನಿರ್ವಹಣೆಗಾಗಿ ಅನುಸರಿಸಬೇಕಾದ ನಿಯಮಗಳು
6. ಗ್ರಾಮ ಪಂಚಾಯತಿ ಸಭೆಗಳನ್ನು ನಡೆಸುವಾಗ ಪಾಲಿಸಬೇಕಾದ ಅಂಶಗಳು
7. ವಾರ್ಡ್/ ಗ್ರಾಮ ಸಭೆಯ ಮಹತ್ವ

ಇತ್ಯಾದಿ ವಿಷಯಗಳನ್ನು ಅಳವಡಿಸುವುದರ ಮೂಲಕ ಗ್ರಾಮ ಪಂಚಾಯತಿ ಸದಸ್ಯರಾಗಿ ನಿರ್ವಹಿಸಬೇಕಾದ ಜವಾಬ್ದಾರಿಯ ಕುರಿತು ಅರಿವು ಮೂಡಿಸುವ ಪ್ರಯತ್ನಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು.

ಪ್ರಸುತ್ತ ಎರಡನೇ ಹಂತದ 3 ದಿನಗಳ ವಿಸ್ತ್ರತ ತರಬೇತಿ ಕಾರ್ಯಕ್ರಮವು 2005ರ ಆಗಸ್ಟ್ 3ನೇ ವಾರದಲ್ಲಿ ಪ್ರಾರಂಭಗೊಂಡಿದ್ದು, 2006ರ ಏಪ್ರಿಲ್ 3ನೇ ವಾರದಲ್ಲಿ ಮುಕ್ತಾಯಗೊಂಡಿದೆ. ಈ ಹಂತದಲ್ಲಿ ಗ್ರಾಮ ಪಂಚಾಯತಿ ಸದಸ್ಯರೊಂದಿಗೆ ಚರ್ಚಿಸಿದ ವಿಷಯಗಳು ಈ ಕೆಳಗಿನಂತಿವೆ.

1. ಸಂಘಟಿತ ಪ್ರಯತ್ನದ ಮೂಲಕ ಸಾಧಿಸಬಹುದಾದ ಗ್ರಾಮಾಭಿವೃದ್ಧಿ
2. ಪಂಚಾಯತ್ ಜಮಾಬಂದಿ
3. ಗ್ರಾಮ ಪಂಚಾಯತಿಯ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿ ಮತ್ತು ಅನುಷ್ಠಾನ
4. ಪಂಚವಾರ್ಷಿಕ ಯೋಜನೆ ಸಿದ್ದಪಡಿಸುವಿಕೆ
5. ಸ್ಥಳೀಯ ಸಂಪನ್ಮೂಲದ ಕ್ರೋಢೀಕರಣ
6. ಗ್ರಾಮ ಪಂಚಾಯತ್ ಹಾಗು ವಿದ್ಯುತ್ ನಿರ್ವಹಣೆ

ಇವೇ ಮುಂತಾದ ಗ್ರಾಮ ಪಂಚಾಯತಿ ವಹಿಸಬೇಕಾದ ಸಮಗ್ರ ಜವಾಬ್ದಾರಿಯ ಕುರಿತ ಅಂಶಗಳ ಬಗ್ಗೆ ಮಾಹಿತಿ ನೀಡಲು ಕ್ರಮ ಕೈಗೊಳ್ಳಲಾಗಿದೆ.

---

* **ಬೋಧಕರು (ದ್ವಾಕ್ರ), ಅ.ನ.ಸಾ.ರಾ.ಗ್ರಾ.ಸಂಸ್ಥೆ, ಮೈಸೂರು.**

ಮೇಲ್ಕಂಡ ಎರಡು ಹಂತಗಳ ತರಬೇತಿ ಅವಧಿಯಲ್ಲಿ ಅಳವಡಿಸಿದ ವಿಷಯಗಳು ಗ್ರಾಮ ಪಂಚಾಯತಿಯ ನಿರ್ವಹಣೆಗೆ ನೇರವಾಗಿ ಸಂಬಂಧಪಟ್ಟಿದರೆ, ಮೂರು ಮತ್ತು ನಾಲ್ಕನೇ ಹಂತಗಳಲ್ಲಿ ನೀಡಲಾಗುವ ಮಾಹಿತಿಯು ವಲಯವಾರು ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯತಿ ವಹಿಸಬೇಕಾದ ಹೊಣೆಗಾರಿಕೆಯನ್ನು ಸ್ಪಷ್ಟಪಡಿಸುವ ಮಾಹಿತಿಯನ್ನು ಒಳಗೊಂಡಿದೆ. ಉದಾ: ಸಂಪೂರ್ಣ ಸಾಕ್ಷರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿಯ ಕರ್ತವ್ಯ, ಆರೋಗ್ಯ, ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮದ ಅನುಷ್ಠಾನದಲ್ಲಿ ಗ್ರಾಮ ಪಂಚಾಯತಿ ವಹಿಸಬೇಕಾದ ಜವಾಬ್ದಾರಿ, ಸಮುದಾಯ ಆಸ್ತಿಗಳ ನಿರ್ವಹಣೆ ಹಾಗು ಸಂರಕ್ಷಣೆ, ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳು, ಮಾಹಿತಿ ಹಕ್ಕು ಕಾಯ್ದೆಯ ಕುರಿತಾದ ಮಾಹಿತಿ ಇತ್ಯಾದಿ ವಿಷಯಗಳನ್ನು ಪಠ್ಯಸೂಚಿಯನ್ನಾಗಿ ಅಳವಡಿಸಲು ನಿರ್ಧರಿಸಲಾಗಿದೆ.

ವಿಶೇಷವಾಗಿ ಎರಡನೇ ಹಂತದ ವಿಸ್ತೃತ ತರಬೇತಿ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಮುನ್ನೋಟ ತಯಾರಿಕೆಗೆ ಸಂಬಂಧಿಸಿದಂತೆ ಪಂಚವಾರ್ಷಿಕ ಯೋಜನೆ ಸಿದ್ಧಪಡಿಸುವ ಕುರಿತು ತರಬೇತಿ ನೀಡಲು ಹೆಚ್ಚಿನ ಒತ್ತನ್ನು ನೀಡಲಾಗಿತ್ತು. ಆದರೆ ಈ ಮಾಹಿತಿಯನ್ನು ಸಂಸ್ಥೆಯು ಹೊಸದಾಗಿ ಅಳವಡಿಸಲು ಮಾಡಿದ ಪ್ರಯತ್ನವೇನಲ್ಲ. ಇದಕ್ಕೂ ಮುನ್ನ ರಾಜ್ಯ ಸರ್ಕಾರ 2002–2007ನೇ ಅವಧಿಯ ಹತ್ತನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ರೂಪಿಸಬೇಕಾದ ಅಭಿವೃದ್ಧಿ ವರದಿ ತಯಾರಿಕೆಗೆ ಮಾರ್ಗಸೂಚಿಯನ್ನು ಹೊರಡಿಸಿತ್ತು. ಇದಕ್ಕೆ ಪೂರಕವಾಗಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಉದಾ: ಬಿಜಾಪುರ ತಾಲ್ಲೂಕಿನ ಸಾರವಾಡ ಗ್ರಾಮ ಪಂಚಾಯತಿಯಲ್ಲಿ, ಬಳ್ಳಾರಿ ಹಾಗು ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಈ ಮಾರ್ಗಸೂಚಿ ಅನ್ವಯ ಪಂಚ ವಾರ್ಷಿಕ ಯೋಜನೆ ತಯಾರಿಕೆಗೆ ಕ್ರಮ ಕೈಗೊಳ್ಳಲಾಗಿತ್ತು. ಆದರೆ ಉಳಿದ ಜಿಲ್ಲೆಗಳಲ್ಲಿ ಈ ರೀತಿಯ ಯೋಜನೆ ತಯಾರಿಕೆ ಪ್ರಕ್ರಿಯೆಗೆ ನಿರೀಕ್ಷಿತ ಪ್ರತಿಕ್ರಿಯೆ ದೊರೆಯಲಿಲ್ಲ. ಇದಕ್ಕೆ ಕಾರಣಗಳನ್ನು ಈ ಕೆಳಗಿನಂತೆ ಅಂದಾಜಿಸಬಹುದು.

1. ಜನಪ್ರತಿನಿಧಿಗಳ ಅರಿವಿನ ಕೊರತೆ
2. ಅಧಿಕಾರಿಗಳು ಅಭಿವೃದ್ಧಿ ಮುನ್ನೋಟ ತಯಾರಿಕೆಯ ಮಹತ್ವದ ಬಗ್ಗೆ ಜನಪ್ರತಿನಿಧಿಗಳಿಗೆ ಮನದಟ್ಟು ಮಾಡಲು ಪ್ರಯತ್ನ ಮಾಡದಿರುವುದು
3. ಈ ಪ್ರಕ್ರಿಯೆಯ ಅವಶ್ಯಕತೆಯ ಕುರಿತು ಸ್ಪಷ್ಟತೆ ಅನುಷ್ಠಾನದ ಹಂತದಲ್ಲಿ ಇಲ್ಲದಿರುವುದು
4. ದೂರ ದೃಷ್ಟಿಕೋನ ಹೊಂದಿ ತಯಾರಿಸುವ ಈ ರೀತಿಯ ಧೀರ್ಘಕಾಲಿಕ ಯೋಜನೆಗಳಿಂದ ಸಾಧಿಸಬಹುದಾದ ಸಮಗ್ರ ಗ್ರಾಮಾಭಿವೃದ್ಧಿ ಕುರಿತು ಸ್ಪಷ್ಟ ಕಲ್ಪನೆ ಇಲ್ಲದಿರುವುದು

ಈ ಹಲವಾರು ಕಾರಣಗಳಿಂದ ಉಳಿದ ಜಿಲ್ಲೆಗಳಲ್ಲಿ ಅಭಿವೃದ್ಧಿ ಯೋಜನೆ ತಯಾರಿಕೆ ಪ್ರಕ್ರಿಯೆಗೆ ನಿರೀಕ್ಷಿತ ಚಾಲನೆ ದೊರೆಯಲಿಲ್ಲ.

ಇದೇ ಸಂಧರ್ಭದಲ್ಲಿ, ಅಂದರೆ ಎರಡನೇ ಹಂತದ ತರಬೇತಿ ವಿನ್ಯಾಸ ರೂಪಿಸುವ ಹಂತದಲ್ಲಿ ರಾಜ್ಯ ಸರ್ಕಾರ ಪುನಃ ಮಾದರಿ ಗ್ರಾಮ ಪಂಚಾಯತಿ ರಚನೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಯೋಜನಾ ವರದಿಯನ್ನು ಸಿದ್ಧಪಡಿಸುವ ಕುರಿತಾದ ಮಾರ್ಗಸೂಚಿಯನ್ನು ಮೇ 2005ರಲ್ಲಿ ಹೊರಡಿಸಿದೆ. ಅಲ್ಲದೇ ಈ ಯೋಜನೆಗಳನ್ನು ತಯಾರಿಸಲು ಜಮಾಬಂದಿ ನಡೆಸಲು ನಿಯೋಜಿಸಲಾದ ಅಧಿಕಾರಿಗಳನ್ನೇ ಗ್ರಾಮ ಪಂಚಾಯತಿ ಯೋಜನೆ ತಯಾರಿಕೆಗೆ ಉಸ್ತುವಾರಿ ಅಧಿಕಾರಿಯನ್ನಾಗಿ ನೇಮಿಸಿದ್ದು, ಈ ಅಧಿಕಾರಿಗಳು ಅಭಿವೃದ್ಧಿ ಯೋಜನಗೆ ತಯಾರಿಕೆ ವಿಷಯದಲ್ಲಿ ಗ್ರಾಮ ಪಂಚಾಯಿಗೆ ನೆರವನ್ನು ನೀಡಬೇಕೆಂದು ಹಾಗು ಈ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಪಾಲ್ಗೊಂಡು ಸಲಹೆ ಸೂಚನೆಗಳನ್ನು ನೀಡಬೇಕೆಂದು ತಿಳಿಸಲಾಗಿತ್ತು. ಆದರೆ ಕ್ಷೇತ್ರ ಮಟ್ಟದಲ್ಲಿ ಸರ್ಕಾರಿ ಅದೇಶದ ಪಾಲನೆ ಆಗದಿರುವುದು ಕಂಡುಬಂದಿದೆ. ರಾಜ್ಯ ಸರ್ಕಾರವು ಈ ಅಭಿವೃದ್ಧಿ ಯೋಜನೆ ತಯಾರಿಕೆ ಪ್ರಕ್ರಿಯೆಗೆ ಬಹಳ ಒತ್ತು ನೀಡಿದ ಕಾರಣದಿಂದ ಎರಡನೇ ಹಂತದ ತರಬೇತಿ ವಿನ್ಯಾಸದಲ್ಲಿ ಅಭಿವೃದ್ಧಿ ಯೋಜನೆ ತಯಾರಿಕೆಗೆ ವಿಶೇಷ ಮಹತ್ವ ನೀಡಲಾಯಿತು. ಅಂದರೆ, 3 ದಿನಗಳ ತರಬೇತಿ ಅವಧಿಯಲ್ಲಿ ಒಂದು ದಿನವನ್ನು ಈ ವಿಷಯಕ್ಕಾಗಿ ಮೀಸಲಿರಿಸಲು ನಿರ್ಧರಿಸಲಾಯಿತು.

## 2. ಪ್ರಸ್ತುತ ಈ ಅಧ್ಯಯನ ಮಂಡನೆಯ ಮೂಲ ಉದ್ದೇಶವೆಂದರೆ,

- ಅಭಿವೃದ್ಧಿ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯನ್ನು ಗ್ರಾಮ ಪಂಚಾಯತಿ ಸದಸ್ಯರಿಗೆ ಸುಲಭವಾಗಿ ಮನದಟ್ಟು ಮಾಡಿಸುವಂತಹ ತರಬೇತಿ ವಿನ್ಯಾಸ ರಚನೆ.
- ಕ್ಷೇತ್ರಕಾರ್ಯ ಅಧ್ಯಯನ ನಡೆಸುವುದರ ಮೂಲಕ ಸ್ವ ಅನುಭವ ಪಡೆದು ಗ್ರಾಮ ಪಂಚಾಯತಿ ಸದಸ್ಯರ ತಿಳುವಳಿಕೆ ಮಟ್ಟವನ್ನು ಆಧರಿಸಿ ಸೂಕ್ತವಾದ ತರಬೇತಿ ವಿಧಾನಗಳ ಅಳವಡಿಕೆಯ ಪ್ರಯತ್ನ

- ತರಬೇತಿಯ ಅವಧಿಯಲ್ಲಿ ಕಲಿಕಾ ಅಂಶಗಳನ್ನು ಗ್ರಹಿಸುವಾಗ ಅಸ್ಪಷ್ಟತೆ ಮೂಡಿದ ಸಂದರ್ಭದಲ್ಲಿ ಸದಸ್ಯರ ಸಾಮರ್ಥ್ಯಗಳಿಗನುಗುಣವಾಗಿ ತರಬೇತಿ ವಿನ್ಯಾಸದ ಮುನರ್ರಚನೆ
- ಯೋಜನೆ ಸಿದ್ಧಪಡಿಸುವ ಸರಳ ಪ್ರಕ್ರಿಯೆಯನ್ನು ಗ್ರಾಮ ಪಂಚಾಯತಿ ಸದಸ್ಯರಿಗೆ ಮನವರಿಕೆ ಮಾಡುವುದಲ್ಲದೇ ಅವರ ಅವಶ್ಯಕತೆಗಳನ್ನು ಅರಿತುಕೊಂಡು ಅನುಷ್ಠಾನಗೊಳಿಸಲು ಪ್ರೇರಣೆ ನೀಡುವುದು

ಈ ಮೇಲ್ಕಂಡ ಅಂಶಗಳನ್ನು ತಿಳಿಸುವ ಪ್ರಕ್ರಿಯೆ ಹಲವಾರು ಹಂತಗಳನ್ನು ಒಳಗೊಂಡಿದೆ. ಈ ಹಲವಾರು ಹಂತಗಳನ್ನು ಕ್ಷೇತ್ರಕಾರ್ಯ ಅಧ್ಯಯನ ಒಳಗೊಂಡಿದ್ದು, ಆ ವಿವರಣೆಯನ್ನು ತಿಳಿಸುವುದೇ ಈ ಅಧ್ಯಯನದ ಮೂಲ ಉದ್ದೇಶ. ಆದರೆ, ಈ ಹಂತಗಳ ವಿಶ್ಲೇಷಣೆಗೆ ಹೋಗುವ ಮುನ್ನ ಅಭಿವೃದ್ಧಿಗೆ ಹಾಗು ಗ್ರಾಮ ಪಂಚಾಯತಿಗೆ ಇರುವ ನೇರ ಸಂಬಂಧದ ಕುರಿತಾದ ಮಾಹಿತಿಯನ್ನು ತಿಳಿದುಕೊಳ್ಳುವುದು ಸೂಕ್ತ.

## 3. ಅಭಿವೃದ್ಧಿಯ ಪರಿಕಲ್ಪನೆ :

### 1) ಅಭಿವೃದ್ಧಿ ಎಂದರೇನು?

ಅಭಿವೃದ್ಧಿಯನ್ನು ಮಾನವನ ಆದಾಯ ಹಾಗು ಆತನು ಹೊಂದಿರುವ ಸವಲತ್ತುಗಳಿಂದ ಮಾತ್ರ ಅಳೆಯುವುದು ಸಾಧ್ಯವಿಲ್ಲ. ಸರಳವಾಗಿ ಹೇಳಬೇಕೆಂದರೆ, ಅಬಿವೃದ್ಧಿಯನ್ನು ಒಂದು ದೇಶ/ ರಾಜ್ಯದ ಒಟ್ಟಾರೆ ಆದಾಯ ಹಾಗು ಕೆಲವು ಕ್ಷೇತ್ರಗಳಲ್ಲಿ ಸಾಧಿಸಿದ ಯಶಸ್ಸಿನಿಂದ ಅಳೆಯಲಾಗದು. ಸಮಾಜದ ಎಲ್ಲಾ ವರ್ಗಗಳಲ್ಲಿ, ಎಲ್ಲಾ ಭಾಗಗಳಲ್ಲಿ, ಎಲ್ಲಾ ಹಂತಗಳಲ್ಲಿ, ಬೆಳವಣಿಗೆಯಾದರೆ ಮಾತ್ರ ಅಬಿವೃದ್ಧಿ ಎನ್ನಬಹುದು. ಇಂದು, ವಿಶ್ವದೆಲ್ಲೆಡೆ, ಒಂದು ದೇಶದಲ್ಲಿ ಮಾನವನ ಅಭಿವೃದ್ಧಿ ಹೇಗಿದೆ ಎಂಬುದನ್ನು ಅಳೆಯಲು ಈ ಕೆಳಕಂಡ ಮಾನದಂಡಗಳನ್ನು ಬಳಸಲಾಗುತ್ತಿದೆ.

1. ಮಾನವನ ಸುಧೀರ್ಘ ಬದುಕು
2. ಶಿಕ್ಷಣದ ಲಭ್ಯತೆ
3. ಸಂಪನ್ಮೂಲಗಳ ಮೇಲಿನ ಹಿಡಿತ
4. ಲಿಂಗ ಸಮಾನತೆ

ಗ್ರಾಮ ಪಂಚಾಯತಿ ಮಟ್ಟದಲ್ಲಿಯೂ ಸಹ ಅಬಿವೃದ್ಧಿ ಸಾಧಿಸಬೇಕಾದರೆ, ಮೇಲ್ಕಂಡ 4 ಅಂಶಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆಯನ್ನು ರೂಪಿಸಬೇಕಿರುತ್ತದೆ. ಈ ರೀತಿ ಯೋಜನೆ ತಯಾರಿಕೆಯ ಮೂಲ ಉದ್ದೇಶವೆಂದರೆ, ಜನರ ಸಮಸ್ಯೆಗಳನ್ನು ಗುರುತಿಸಿ, ಆದ್ಯತೆ ನೀಡಿ ಆ ಸಮಸ್ಯೆಯ ಪರಿಹಾರಕ್ಕೆ ಯೋಜನೆ ರೂಪಿಸುವುದು. ಈ ರೀತಿಯ ಯೋಜನೆಗಳ ತಯಾರಿ ಹಾಗು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದಿಂದ ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಣೆಗೊಳಿಸಬಹುದು.

ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತಿಯ ಪಾತ್ರ ಬಹುಮುಖ್ಯವೆನಿಸುತ್ತದೆ. ಸಂವಿಧಾನದ 73ನೇ ತಿದ್ದುಪಡಿಯ ಉದ್ದೇಶವೇ ಅಧಿಕಾರ ವಿಕೇಂದ್ರಿಕರಣ ಹಾಗು ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸುವುದು. ಈ ಉದ್ದೇಶದ ಈಡೇರಿಕೆಗಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಿದೆ. ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಗೆ ಹೆಚ್ಚಿನ ಪ್ರಾಮುಖ್ಯವಿದೆ. ಏಕೆಂದರೆ, ಗ್ರಾಮ ಪಂಚಾಯತಿ ಮೂರು ಸ್ಥರಗಳ ಪಂಚಾಯತಿ ವ್ಯವಸ್ಥೆಯಲ್ಲಿ ಜನರಿಗೆ ಹತ್ತಿರವಿರುವ ಸ್ಥಳೀಯ ಸರ್ಕಾರ. ಸ್ಥಳೀಯ ಸರ್ಕಾರದ ಪ್ರತಿನಿಧಿಗಳು ಅಭಿವೃದ್ಧಿಯ ಕುರಿತು ಸ್ಪಷ್ಟವಾದ ಕಣ್ಣೋಟವನ್ನು ಹೊಂದುವ ಮೂಲಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಒದಗಿಸುವುದಕ್ಕೆ ಮೂರಕವಾಗಿ ತಮ್ಮ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರೆ ಮಾತ್ರ ನಿಜವಾದ ಅಭಿವೃದ್ಧಿ ಸಾಧಿಸಬಹುದು. ಇದನ್ನು ಸಾಧಿಸಬೇಕಾದರೆ ಜವಾಬ್ದಾರಿವಹಿಸಿ ಜನಸಹಭಾಗಿತ್ವದ ಮೂಲಕ ಅಭಿವೃದ್ಧಿ ಮುನ್ನೋಟ ತಯಾರಿಕೆ ಕಾರ್ಯಕ್ರಮವನ್ನು ರೂಪಿಸಬೇಕಿರುತ್ತದೆ.

ಈ ರೀತಿಯ ಯೋಜನೆಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ರೂಪಿಸಲು ಸರ್ಕಾರ ಮಾರ್ಗಸೂಚಿಯನ್ನು ಹೊರಡಿಸಿದೆ. ಈ ಮಾರ್ಗಸೂಚಿಯಲ್ಲಿ ಸ್ಥಳೀಯ ಮಾನವ ಸಂಪನ್ಮೂಲಗಳ ಲಭ್ಯತೆ, ಆರ್ಥಿಕ ಸಂಪನ್ಮೂಲಗಳ ಲಭ್ಯತೆ, ಭೌತಿಕ ಸಂಪನ್ಮೂಲಗಳ ಲಭ್ಯತೆಗಳ ಆಧಾರದ ಮೇರೆಗೆ ಆಯಾ ವಲಯಗಳ ಅಭಿವೃದ್ಧಿ ಮುನ್ನೋಟವನ್ನು ತಯಾರಿಸಬೇಕಿರುತ್ತದೆ. ತರಬೇತಿಯು ಈ

ವಿಷಯಕ್ಕೆ ಆದ್ಯತೆ ನೀಡುತ್ತಿರುವುದರಿಂದ ಗ್ರಾಮ ಪಂಚಾಯತಿಯು ತನ್ನ ಜವಾಬ್ದಾರಿ ಹೊರುವಲ್ಲಿ ಸಫಲತೆ ಕಂಡುಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ.

ಅಭಿವೃದ್ಧಿ ಮುನ್ನೋಟ ತಯಾರಿಸುವಾಗ ಎಲ್ಲಾ ವಿಷಯಗಳನ್ನು ವಾರ್ಡ್/ ಗ್ರಾಮಸಭೆಗಳ ಮುಂದೆ ಮಂಡಿಸಿ ನಿರ್ಣಯ ಕೈಗೊಳ್ಳುವುದು ಅವಶ್ಯ. ಆದರೆ, ಇದು ಹೇಳಿದಷ್ಟು ಸುಲಭವಾದ ಪ್ರಕ್ರಿಯೆಯಲ್ಲ. ಕೇವಲ ಫಲಾನುಭವಿಗಳ ಆಯ್ಕೆಗೆ ಮಾತ್ರ ಸೀಮಿತವಾಗಿರುವ ಗ್ರಾಮ ಸಭೆಗಳಲ್ಲಿ ಅಭಿವೃದ್ಧಿ ಪ್ರಕ್ರಿಯೆ ಕುರಿತು ಚರ್ಚಿಸುವ ಪ್ರವೃತ್ತಿಯನ್ನು ಬೆಳೆಸಬೇಕಾಗಿರುವುದು ಗ್ರಾಮ ಪಂಚಾಯತಿಯ ಆದ್ಯ ಕರ್ತವ್ಯವಾಗಿದೆ.

## 2. ಗ್ರಾಮ ಪಂಚಾಯತಿಗಳು ಯೋಜನೆಯನ್ನು ಹೇಗೆ ತಯಾರಿಸಬೇಕು?

ಪ್ರತಿ ಗ್ರಾಮ ಪಂಚಾಯತಿಯ 5–10 ವರ್ಷಗಳ ಧೀರ್ಘಕಾಲಿಕ ಯೋಜನೆಯನ್ನು ಸಿದ್ಧಪಡಿಸಬೇಕು. ಪ್ರತಿ ವರ್ಷ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ವರ್ಷವಾರು ಆದ್ಯತೆ ಗುರುತಿಸಿ ವಾರ್ಷಿಕ ಯೋಜನೆ ತಯಾರಿಸಬೇಕು. ವಿವಿಧ ಹಂತಗಳನ್ನೊಳಗೊಂಡ ಈ ಪ್ರಕ್ರಿಯೆಯು ಸಫಲವಾಗಬೇಕಾದರೆ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಿರುತ್ತದೆ.

- ಪ್ರಸಕ್ತ ಸಾಲಿಗೆ ನಿಗದಿಪಡಿಸಿದ ಅನುದಾನವನ್ನು ಆಧಾರವಾಗಿಟ್ಟುಕೊಂಡು ಪ್ರತಿವರ್ಷ 5%ರಿಂದ 10% ಹೆಚ್ಚಿಗೆ ಅನುದಾನ ದೊರೆಯಬಹುದು ಎಂಬ ನಿರೀಕ್ಷೆಯಿಂದ ಗ್ರಾಮ ಪಂಚಾಯತಿಗೆ ಲಭ್ಯವಾಗುವ ಅನುದಾನವನ್ನು ಲೆಕ್ಕ ಮಾಡಬೇಕು.
- ಯಾವ ವಲಯದಲ್ಲಿ ಅಭಿವೃದ್ಧಿ ಸಾಧಿಸಬೇಕು ಎಂಬುದನ್ನು ನಿರ್ಧರಿಸಲು ವಲಯವಾರು ಅಭಿವೃದ್ಧಿ ಅಂತರಗಳನ್ನು ಪಟ್ಟಿ ಮಾಡಬೇಕು. ಇದಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲು ಈಗಾಗಲೇ ತಿಳಿಸಿದಂತೆ ಮೂಲಭೂತ ಸೌಕರ್ಯಗಳ ಸಮೀಕ್ಷೆ, ನೈಸರ್ಗಿಕ ಸಂಪನ್ಮೂಲಗಳ ಸಮೀಕ್ಷೆ, ಕೌಟುಂಬಿಕ ಸಮೀಕ್ಷೆ ಹಾಗು ಹಣಕಾಸು ಸಂಪನ್ಮೂಲಗಳ ಸಮೀಕ್ಷೆ ಮಾಡಬೇಕಿರುತ್ತದೆ.

  ⇒ **ಮೂಲಭೂತ ಸೌಕರ್ಯಗಳ ಸಮೀಕ್ಷೆ** : ಗ್ರಾಮ ಪಂಚಾಯತಿ ತಾನು ಹೊಂದಿರುವ ಮೂಲಭೂತ ಸೌಕರ್ಯಗಳಾದ ಕಟ್ಟಡ, ನೀರಿನ ಲಭ್ಯತೆ, ರಸ್ತೆ ಬೀದಿ ದೀಪಗಳ ವ್ಯವಸ್ಥೆ ಇತ್ಯಾದಿ ಪಟ್ಟಿ ಮಾಡಬೇಕು. ಇದರೊಂದಿಗೆ ಈ ಸೌಲಭ್ಯಗಳ ಕೊರತೆಯ ಪಟ್ಟಿಯನ್ನು ಸಹ ಮಾಡಬೇಕು.

  ⇒ **ನೈಸರ್ಗಿಕ ಸಂಪನ್ಮೂಲಗಳ ಸಮೀಕ್ಷೆ ;** ಈ ರೀತಿಯ ಸಮೀಕ್ಷೆಯಿಂದ ಲಭ್ಯವಿರುವ ಸಂಪನ್ಮೂಲಗಳು ಯಾವುವು? ಅವುಗಳ ಸಂಪೂರ್ಣ ಬಳಕೆಯಾಗುತ್ತಿದೆಯೇ? ಇವುಗಳ ಸದ್ಬಳಕೆಗೆ ಏನು ಮಾಡಬಹುದು? ಎಂಬುದರ ಬಗ್ಗೆ ನಿರ್ಧರಿಸಲು ಈ ಸಮೀಕ್ಷೆ ನೆರವಾಗುತ್ತದೆ.

  ⇒ **ಕೌಟಂಬಿಕ ಸಮೀಕ್ಷೆ :** ಈ ರೀತಿಯ ಸಮೀಕ್ಷೆಯು ಮಾನವ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಬಡತನ ನಿರ್ಮೂಲನೆ, ನಿರೋದ್ಯೋಗ ನಿವಾರಣೆಯಂತಹ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಕಾರಿಯಾಗುತ್ತದೆ.

  ⇒ **ಹಣಕಾಸು ಸಂಪನ್ಮೂಲಗಳ ಸಮೀಕ್ಷೆ :** ಸರ್ಕಾರದ ಅನುದಾನದೊಂದಿಗೆ ಸ್ಥಳೀಯವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮಾಹಿತಿಯನ್ನು ಸಂಗ್ರಹಿಸಿಬೇಕಿರುತ್ತದೆ.

- ಈ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಾರ್ಡ್/ ಗ್ರಾಮ ಸಭೆಗಳಲ್ಲಿ ಈ ಬಗ್ಗೆ ಚರ್ಚಿಸಬೇಕು. ಜನರಿಂದ ಬಂದಿರುವ ಬೇಡಿಕೆಗಳು/ ಸಮಸ್ಯೆಗಳನ್ನು ಪಟ್ಟಿ ಮಾಡಿ, ಅದ್ಯತೆ ಗುರುತಿಸಿ ಪರಿಹಾರಗಳನ್ನು ಪಟ್ಟಿ ಮಾಡಬೇಕು. ಈ ಕಾರ್ಯವನ್ನು ಮಾಡಲು ವಲಯವಾರು ಕಾರ್ಯಕ್ರಮಗಳನ್ನು ರೂಪಿಸಬೇಕು.
- ಮುಂದಿನ ಹಂತದಲ್ಲಿ ತಜ್ಞರೊಂದಿಗೆ ವಿಚಾರಗೋಷ್ಠಿ ನಡೆಸಿ ಪ್ರತಿ ವಿಷಯದ ಕುರಿತು ಸಮಸ್ಯೆ ಹಾಗು ಪರಿಹಾರಗಳನ್ನು ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕು. ಪುನಃ ಇದನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ತಿದ್ದುಪಡಿಗಳೊಂದಿಗೆ ಪ್ರಸ್ತಾವನೆಯನ್ನು ಅಂತಿಮಗೊಳಿಸಬೇಕಿರುತ್ತದೆ. ಕಾರ್ಯಕ್ರಮದ ಅನುಷ್ಠಾನಕ್ಕೆ ಬಳಸುವ ಕಾರ್ಯತಂತ್ರಗಳನ್ನು ತಜ್ಞರ ಸಮಿತಿಯಿಂದ ಪಡೆದು ಕೊಳ್ಳಬೇಕಿರುತ್ತದೆ.
- ಯಾವ ಕಾರ್ಯಕ್ರಮಗಳ ಮೂಲಕ ಮಾನವ ಅಭಿವೃದ್ಧಿ, ಪ್ರದೇಶಾಭಿವೃದ್ಧಿ, ಆರ್ಥಿಕ ಅಭಿವೃದ್ಧಿ ಹಾಗು ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಾಗುತ್ತದೋ ಅಂತಹ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಈ ರೀತಿಯ ಪ್ರಯತ್ನಗಳೇ ಮುಂದೆ ರಾಷ್ಟ್ರ ತಯಾರಿಸುವ ಪಂಚವಾರ್ಷಿಕ ಯೋಜನೆಗೆ ಬುನಾದಿಯಾಗಬೇಕು.

## 4. ಕ್ಷೇತ್ರಕಾರ್ಯ ಅಧ್ಯಯನದ ಪ್ರಮುಖ ಅಂಶಗಳು :

### 1) ಯೋಜನೆ ವಿನ್ಯಾಸಕ್ಕೆ ಸಂಬಂಧಿಸಿದಂತೆ ಪಠ್ಯಸೂಚಿ ತಯಾರಿಗೆ ನಡೆಸಿದ ಕಾರ್ಯಾಗಾರ :-

1. ಅಭಿವೃದ್ಧಿ ಮುನ್ನೋಟ ತಯಾರಿ ಹಾಗು ಪಂಚವಾರ್ಷಿಕ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯನ್ನು ತರಬೇತಿಗೆ ಅಧಿವೇಶನವಾಗಿ ಅಳವಡಿಸುವುದು ಎಂದು ನಿರ್ಧರಿಸಿದಾಗ, ಈ ವಿಷಯವನ್ನು ಸದಸ್ಯರಿಗೆ ಸರಳವಾಗಿ ತಿಳಿಸಿಕೊಡುವುದು ಹೇಗೆ ಎಂಬ ಪ್ರಶ್ನೆ ಎದುರಾಯಿತು. ಅದಕ್ಕೂ ಮುನ್ನ ಸದಸ್ಯರಿಗೆ ತಿಳುವಳಿಕೆ ಕೊಡುವ ಸಂಪನ್ಮೂಲ ವ್ಯಕ್ತಿಗಳಿಗೆ ನಡೆಸುವ ತರಬೇತಿದಾರರ ತರಬೇತಿಯ ತರಬೇತಿ ವಿನ್ಯಾಸ ಹಾಗು ಅದಕ್ಕೆ ಪೂರಕವಾಗಿ ಒದಗಿಸಬೇಕಾದ ಓದುವ ಸಾಮಗ್ರಿಯಲ್ಲಿ ಅಳವಡಿಸಬೇಕಾದ ಪಠ್ಯಸೂಚಿಯ ಕುರಿತು ಚರ್ಚೆ ನಡೆಸಲಾಯಿತು. ಈ ಪ್ರಕ್ರಿಯೆಯಲ್ಲಿ ಈಗಾಗಲೇ ಪಾಲ್ಗೊಂಡಿರುವ ತಜ್ಞರು ಹಾಗು ಪಾಲುದಾರರನ್ನು ಆಹ್ವಾನಿಸಿ ಕಾರ್ಯಾಗಾರ ನಡೆಸುವುದರ ಮೂಲಕ ಮಾಹಿತಿ ಸಂಗ್ರಹಿಸಲು ಸೂಕ್ತವೆಂದು ನಿರ್ಧರಿಸಿ, ದಿ॥ 24.06.05ರಲ್ಲಿ ಒಂದು ದಿನದ ಕಾರ್ಯಾಗಾರ ನಡೆಸಲಾಯಿತು. ಈ ಕಾರ್ಯಾಗಾರದಲ್ಲಿ ಸಂಸ್ಥೆಯ ಬೋಧಕರು, ಸಲಹೆಗಾರರು ಯೋಜನಾ ಪ್ರಕ್ರಿಯೆಯಲ್ಲಿ ಅನುಭವ ಹೊಂದಿರುವ ಅಧಿಕಾರಿಗಳು ಹಾಗು ಈಗಾಗಲೇ ಅಭಿವೃದ್ಧಿ ಮುನ್ನೋಟ ತಯಾರಿಕೆಯಲ್ಲಿ ಕ್ಷೇತ್ರಮಟ್ಟದಲ್ಲಿ ಪ್ರಾಯೋಗಿಕ ಅನುಭವ ಪಡೆದ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಈ ಕಾರ್ಯಾಗಾರದಲ್ಲಿ ಪಠ್ಯಸೂಚಿಗೆ ಸಂಬಂಧಿಸಿದಂತೆ ಕೆಳಕಂಡ ವಿಷಯಗಳಿಗೆ ಕುರಿತಾದ ವಿವರಣೆ ಹಾಗು ವಿಧಾನಗಳನ್ನು ಅಳವಡಿಸಲು ನಿರ್ಧರಿಸಲಾಯಿತು.

- ಅಭಿವೃದ್ಧಿಯ ಪರಿಕಲ್ಪನೆ ಹಾಗು ಗ್ರಾಮ ಪಂಚಾಯತಿಗೂ ಅಭಿವೃದ್ಧಿಗೂ ಇರುವ ನೇರ ಸಂಬಂಧ
- ಗ್ರಾಮ ಮಟ್ಟದಲ್ಲಿ ತಯಾರಿಸುವ ಅಭಿವೃದ್ಧಿ ಯೋಜನೆಗೆ ಪೂರಕವಾಗಿ ಸಂಗ್ರಹಿಸಬೇಕಾದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಗೆ ಬಳಸಬೇಕಾದ 25 ರೀತಿಯ ನಮೂನೆಗಳು
- ಅಭಿವೃದ್ಧಿ ವಲಯದಲ್ಲಿ ಸಾಧಿಸಬೇಕಾದ ಆದ್ಯತಾ ವಲಯಗಳು
- ಅಭಿವೃದ್ಧಿ ಯೋಜನೆ ತಯಾರಿಗೆ ಮುನ್ನ ನಡೆಸಬೇಕಾದ ಪೂರ್ವ ತಯಾರಿ

  - ಸಂಪನ್ಮೂಲ ನಕ್ಷೆ ಬಿಡಿಸುವುದು
  - ವಾರ್ಡ್/ ಗ್ರಾಮ ಸಭೆಯಿಂದ ಅನುಮೋದನೆ ಪಡೆಯಬೇಕಾದ ಕಾರ್ಯಕ್ರಮಗಳ ಪಟ್ಟಿ
  - ವಲಯವಾರು ಯೋಜನಾ ಸಮಿತಿಗಳ ಕಾರ್ಯತಂಡ ರಚನೆ ಹಾಗು ನಿರ್ವಹಿಸಬೇಕಾದ ಕಾರ್ಯಗಳು
  - ಲಭ್ಯವಿರುವ ಅನುದಾನ ಹಾಗು ಮೇಲ್ಹಂತದ ಪಂಚಾಯತಿಗಳಿಂದ ಹಾಗು ಇತರ ಮೂಲಗಳಿಂದ ನಡೆಸಬಹುದಾದ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ 5 ವರ್ಷಗಳ ಯೋಜನೆ ತಯಾರಿಕೆಯನ್ನು ಸಿದ್ಧಪಡಿಸುವುದು. ಈ ಹಂತದಲ್ಲಿ ಪಂಚಾಯತಿ ಮಟ್ಟದಲ್ಲಿ ವಿಚಾರ ಸಂಕಿರಣ ನಡೆಸಿ ತಜ್ಞರ ಅಭಿಪ್ರಾಯ ಪಡೆದುಕೊಳ್ಳುವುದು
  - ಅಂತಿಮ ಯೋಜನೆಯ ಕರಡು ಪ್ರತಿಗೆ ಸಾಮಾನ್ಯ ಸಭೆಯ ಒಪ್ಪಿಗೆ ಪಡೆದು ಮುಂದಿನ ಕ್ರಮ ಕೈಗೊಳ್ಳುವುದು

ಈ ರೀತಿ ವಿವರಿಸಿದಂತೆ ತರಬೇತಿದಾರರ ತರಬೇತಿಯ ಪಠ್ಯಸೂಚಿಯಲ್ಲಿ ಅಳವಡಿಸಬಹುದಾದ ವಿಷಯಗಳು, 25 ನಮೂನೆಗಳಲ್ಲಿರಬೇಕಾದ ಕಾಲಂಗಳು, ಅದಕ್ಕಾಗಿ ಮಾಹಿತಿಯನ್ನು ಸಂಗ್ರಹಿಸುವ ವಿಧಾನ ಇತ್ಯಾದಿ ಕುರಿತು ಅಂತಿಮ ರೂಪುರೇಷೆಯನ್ನು ಸಿದ್ಧಪಡಿಸಲಾಯಿತು.

ಪಠ್ಯಸೂಚಿಯ ರಚನೆಯ ನಂತರ ತರಬೇತಿ ವಿನ್ಯಾಸ ರೂಪಿಸುವ ಮೊದಲು ಯಾವುದಾದರೊಂದು ಗ್ರಾಮ ಪಂಚಾಯತಿಯಲ್ಲಿ ಕ್ಷೇತ್ರ ಪ್ರಯೋಗ ನಡೆಸುವುದರ ಮೂಲಕ ಸ್ವ ಅನುಭವ ಪಡೆದು ನಂತರ ತರಬೇತಿ ವಿನ್ಯಾಸ ರೂಪಿಸುವುದು ಸೂಕ್ತವೆಂದು ನಿರ್ಧರಿಸಲಾಯಿತು. ಶಾಲಾ ಮಕ್ಕಳನ್ನು ಅಭಿವೃದ್ಧಿ ಯೋಜನೆ ತಯಾರಿಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ಪಂಚವಾರ್ಷಿಕ ಯೋಜನೆ ತಯಾರಿಸುವ ಪ್ರಯತ್ನ ಮಾಡಿರುವ ಕುಂದಾಪುರ ತಾಲ್ಲೂಕಿನ 'ನಮ್ಮ ಭೂಮಿ' ಸಂಸ್ಥೆಗೆ ಹಾಗು ಅದೇ ತಾಲ್ಲೂಕಿನ ಮರವಂತೆ ಗ್ರಾಮ ಪಂಚಾಯತಿಗೆ ದಿ॥ 19.07.05 ಹಾಗು ದಿ॥ 20.07.05ರಂದು ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಯಿತು.

## 2) ನಮ್ಮ ಭೂಮಿ – ಸಂಸ್ಥೆಗೆ ಭೇಟಿ ಹಾಗು ಮಾಹಿತಿ ಸಂಗ್ರಹಣೆ :–

ನಮ್ಮ ಭೂಮಿ ಸಂಸ್ಥೆಯ ಕನ್ಸರ್ನ್ಡ ಫಾರ್ ವರ್ಕಿಂಗ್ ಚಿಲ್ಡ್ರನ್ (Concerned for working children) ಘಟಕವು ಕುಂದಾಪುರ ತಾಲ್ಲೂಕಿನ ಎಲ್ಲಾ 56 ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳನ್ನು ಪಂಚ ವಾರ್ಷಿಕ ಯೋಜನೆ ತಯಾರಿ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವುದರ ಮೂಲಕ ಜನ ಸಹಭಾಗಿತ್ವ ಯೋಜನೆ ತಯಾರಿಕೆಗೆ ಪ್ರಾಶಸ್ತ್ಯ ನೀಡಿದ ಸಂಸ್ಥೆ. ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳು ನಿರ್ಧಾರ ತೆಗೆದುಕೊಳ್ಳುವ ಹಂತದಲ್ಲಿ ಪಾಲ್ಗೊಳ್ಳುವ ಮೂಲಕ ಅವರ ಅವಶ್ಯಕತೆಗಳನ್ನು, ಅನಿಸಿಕೆಗಳನ್ನು ಮತ್ತು ಸಲಹೆಗಳನ್ನು ಪಂಚಾಯತಿ ಮಟ್ಟದಲ್ಲಿ ಹಂಚಿಕೊಳ್ಳುವ ಅವಕಾಶವನ್ನು ಸೃಷ್ಟಿಸಲಾಯಿತು. ಆದರೆ, ಮಕ್ಕಳು ಇಂತಹ ಅನುಭವ ಹೊಂದಿಲ್ಲದ ಕಾರಣ ಸಂಸ್ಥೆಯು ಇಡೀ ಪ್ರಕ್ರಿಯೆಯ ಸಂಯೋಜನೆಯ ಹೊಣೆ ಹೊತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡಿತು. ಈ ರೀತಿಯ ಯೋಜನೆ ತಯಾರಿಕೆ ಪ್ರಕ್ರಿಯೆಯಲ್ಲಿ 10 ರಿಂದ 15 ವಯಸ್ಸಿನ ಸುಮಾರು 20,000 ಮಕ್ಕಳು ಪಾಲ್ಗೊಂಡಿರುತ್ತಾರೆ. ಈ ಮಕ್ಕಳು ಮಾಹಿತಿ ಸಂಗ್ರಹಣೆಯ ಚರ್ಚೆಯಲ್ಲಿ ಹಾಗು ಗ್ರಾಮ ಸಭೆಯಲ್ಲಿ ಉತ್ಸಾಹದಿಂದ ಭಾಗವಹಿಸಿ ಜನಪರ ಯೋಜನೆ ರೂಪುಗೊಳ್ಳಲು ಕಾರಣಕರ್ತರಾಗಿರುತ್ತಾರೆ.

ಮಕ್ಕಳ ಈ ರೀತಿ ಭಾಗವಹಿಸುವಿಕೆಯು ಒಂದೆಡೆ ಹಿರಿಯರನ್ನು ಯೋಜನೆ ಪ್ರಕ್ರಿಯೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ತೊಡಗುವಂತೆ ಮಾಡಿದರೆ, ಇನ್ನೊಂದೆಡೆಯಲ್ಲಿ ಮಕ್ಕಳಿಗಿರುವ ನ್ಯಾಯದ ಪರಿಕಲ್ಪನೆ ಹಾಗು ಜನರ ಸಮಸ್ಯೆಗಳಿಗೆ ಸಹಾನುಭೂತಿ ವ್ಯಕ್ತಪಡಿಸುವ ಪ್ರಕ್ರಿಯೆಯು ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆಗೆ ಪ್ರೇರಣೆ ನೀಡಿದೆ. ದೇಶದ ಭಾವಿ ಯುವ ಜನಾಂಗವು 'ಉತ್ತಮ ರಾಜಕೀಯ ನಿರ್ಧಾರ' ಕೈಗೊಳ್ಳಲು ನೆರವಾಗುವಂತಹ ವೇದಿಕೆಯನ್ನು ಈ ಪ್ರಕ್ರಿಯೆ ನೀಡಿದೆ ಎಂದರೆ ತಪ್ಪಾಗಲಾರದು.

ಅಭಿವೃದ್ಧಿ ಯೋಜನೆ ತಯಾರಿಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಮಕ್ಕಳ ಪ್ರತಿಕ್ರಿಯೆ ತಂದ ಫಲಿತಾಂಶ ನಿರೀಕ್ಷೆಗೂ ಮೀರಿದ ಕೊಡುಗೆ. ಅಂಗವಿಕಲ ಮಕ್ಕಳ ಸಮಸ್ಯೆ. ಸಾರಿಗೆ ಸಮಸ್ಯೆ, ಪರಿಸರ ನಿರ್ವಹಣೆ, ಗ್ರಾಮಸ್ಥರು ಎದುರಿಸುತ್ತಿರುವ ದೈನಂದಿನ ಸಮಸ್ಯೆಗಳು ಇತ್ಯಾದಿಯನ್ನು ಪಟ್ಟಿ ಮಾಡಿ ಪರಿಹಾರವನ್ನು ಸಹ ಮಕ್ಕಳೇ ಸೂಚಿಸಿದ್ದರು. ಮಕ್ಕಳೇ ನಡೆಸಿದ ಈ ಚಟುವಟಿಕೆಯು ಪಂಚಾಯತಿ ಸದಸ್ಯರಲ್ಲಿ, ಸಿಬ್ಬಂದಿಯವರಲ್ಲಿ ಹಾಗು ಸಾರ್ವಜನಿಕರಲ್ಲಿ ಪಂಚಾಯತಿ ಸಮಸ್ಯೆಗಳನ್ನು ಹಾಗು ಅವಶ್ಯಕತೆಗಳನ್ನು ಆಳವಾಗಿ ಅರ್ಥಮಾಡಿಕೊಳ್ಳುವ ದೃಷ್ಟಿಕೋನ ಬೆಳೆಸಿಕೊಳ್ಳಲು ಸಹಾಯ ಮಾಡಿತಲ್ಲದೇ, ಸ್ಥಳೀಯ ಸರ್ಕಾರ ಮತ್ತು ಸಾರ್ವಜನಿಕರ ನಡುವಿನ ಅಂತರ ಕಡಿಮೆ ಮಾಡುವಲ್ಲಿ ನೆರವಾಯಿತೆಂಬುದು ಚರ್ಚೆಯಲ್ಲಿ ಕಂಡು ಬಂದ ವಿಷಯ. ಇಡೀ ಪ್ರಕ್ರಿಯೆಯು ನಡೆದ ವಿವಿಧ ಹಂತಗಳ ವಿವರಣೆ ಈ ಕೆಳಕಂಡಂತಿದೆ.

- 10ರಿಂದ 15 ವಯಸ್ಸಿನ ಆಯ್ದ ಮಕ್ಕಳಿಂದ ಗ್ರಾಮ ಸಮೀಕ್ಷೆ ಮಾಡಲು ಹಾಗು ಮಾಹಿತಿ ಸಂಗ್ರಹಿಸಿ ಕ್ರೋಢೀಕರಿಸಿ, ವಿಶ್ಲೇಷಣೆ ನಡೆಸಲು ಅನುವಾಗುವಂತೆ ಸಂಸ್ಥೆಯ ಪದಾಧಿಕಾರಿಗಳಿಂದ ತರಬೇತಿ
- ಮಕ್ಕಳಿಂದ ಸಮೀಕ್ಷೆ ಮತ್ತು ಗ್ರಾಮ ಸಭೆಯ ಮೂಲಕ ಮಾಹಿತಿ ಸಂಗ್ರಹಣೆ
- ಸಮಸ್ಯೆಗಳ ಪಟ್ಟಿ, ಆದ್ಯತೆ ಗುರುತಿಸುವಿಕೆ ಹಾಗು ಪರಿಹಾರ ಸೂಚಿಸುವ ಕ್ರಿಯೆ
- ಸಮಸ್ಯೆಗಳಿಗೆ ಪೂರಕವಾದ ಹಾಗು ಖಚಿತವಾದ ಮಾಹಿತಿ ಮಂಡನೆ
- ಮಕ್ಕಳು ಸಮಸ್ಯೆಯನ್ನು ಕೇವಲ ಶಿಕ್ಷಣಕ್ಕೆ ಮಾತ್ರ ಮೀಸಲಿರಿಸದೆ, ಕುಡಿಯುವ ನೀರು, ಉರುವಲು ಮತ್ತು ಬೀದಿ ದೀಪಗಳ ವ್ಯವಸ್ಥೆ ಹಾಗು ಅಗತ್ಯವಾಗಿ ಬೇಕಾಗಿರುವ ಕಾಮಗಾರಿಗಳ ಬಗ್ಗೆಯೂ ಸಹ ಗಮನ ಹರಿಸಿರುವುದು ಕಂಡುಬಂದಿದೆ.

## 3) ಮರವಂತೆ ಗ್ರಾಮ ಪಂಚಾಯತಿಯಲ್ಲಿ ನಡೆಸಿದ ಜನ ಸಹಭಾಗಿತ್ವ ಪ್ರಕ್ರಿಯೆಯ ಕ್ಷೇತ್ರ ಪ್ರಯೋಗ :–

ಅಭಿವೃದ್ಧಿ ತಯಾರಿಕೆ ಪ್ರಕ್ರಿಯೆ ಅರ್ಥಪೂರ್ಣವಾಗಿ ನಡೆಯಬೇಕಾದರೆ, ಯೋಜನಾ ತಯಾರಿಕೆ ಗ್ರಾಮ ಪಂಚಾಯತಿ ಸದಸ್ಯರಿಂದ ನಡೆಯದೆ ಜನಸಹಭಾಗಿತ್ವದ ಮೂಲಕ ಗ್ರಾಮ ಮಟ್ಟದಲ್ಲಿ ನಡೆಯುವಂತಿರಬೇಕು. ಹೀಗಾದಲ್ಲಿ ಮಾತ್ರ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ಹಿಂದೆ ಜನಸಹಭಾಗಿತ್ವ ಕೇವಲ ಯೋಜನೆಯ ಮೇಲ್ವಿಚಾರಣೆ ಹಂತದಲ್ಲಿತ್ತು. ಆದರೆ, ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಜನಸಹಭಾಗಿತ್ವವು ನಿರ್ಧಾರ ತೆಗೆದುಕೊಳ್ಳುವ, ಅನುಷ್ಠಾನ ಮಾಡುವ, ಮೇಲ್ವಿಚಾರಣೆ ಮಾಡುವ ಹಾಗು ಮೌಲ್ಯಮಾಪನ ಮಾಡುವ ಹಂತಗಳಲ್ಲಿಯೂ ಇರಬೇಕಾಗುತ್ತದೆ. ಮರವಂತೆ ಗ್ರಾಮ ಪಂಚಾಯತಿಯಲ್ಲಿ ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪಡೆದ ಅನುಭವವನ್ನು ಈ ಕೆಳಗಿನ ಹಂತಗಳ ಮೂಲಕ ವಿವರಣೆ ನೀಡಲಾಗಿದೆ.

| ದಿ॥ 19.07.05 | |
|---|---|
| **ಸಮಯ** | **ವಿವರಣೆ** |
| 03.00 – 06.00 | ▪ ಗ್ರಾಮ ಪಂಚಾಯತಿ ಸದಸ್ಯರೊಡನೆ ಪರಸ್ಪರ ಪರಿಚಯ<br>▪ ಮರವಂತೆ ಗ್ರಾಮ ಪಂಚಾಯತಿಯ ಭೇಟಿಯ ಉದ್ದೇಶದ ಮನವರಿಕೆ<br>▪ ಜನ ಸಹಭಾಗಿತ್ವ ಪಡೆಯುವುದರ ಮೂಲಕ ಅಭಿವೃದ್ಧಿ ಯೋಜನೆ ತಯಾರಿಕೆಯ ಉದ್ದೇಶ<br>▪ ಮರುದಿನ ನಡೆಸಬೇಕಾದ ಚಟುವಟಿಕೆಗಳ ವಿವರಣೆ<br>▪ ಗ್ರಾಮ ಪಂಚಾಯತಿಯ ಸಾಮಾನ್ಯ ಮಾಹಿತಿಯ ಸಂಗ್ರಹಣೆ |
| **ದಿ॥ 20.07.05** | |
| 10.00 – 12.00 | ▪ ಮರವಂತೆ ಗ್ರಾಮ ಪಂಚಾಯತಿಯ 3 ವಾರ್ಡ್‌ಗಳ ಸದಸ್ಯರೊಂದಿಗೆ ಪ್ರತ್ಯೇಕ ಚರ್ಚೆಯಲ್ಲಿ 3 ವಲಯಗಳಾದ ಉತ್ಪಾದನಾ, ಸೌಕರ್ಯ ಹಾಗು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಆಯಾ ವಾರ್ಡಿನಲ್ಲಿ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆ ಹಾಗು ಪಟ್ಟಿ ಮಾಡುವುದು |
| 12.00 – 01.30 | ▪ ಪಂಚಾಯತಿಯ ಒಟ್ಟು ಸದಸ್ಯರ ಸಮ್ಮುಖದಲ್ಲಿ ವಾರ್ಡ್‌ವಾರು ಸಮಸ್ಯೆಗಳ ವಲಯವಾರು ಕ್ರೋಢೀಕರಣ<br>▪ ಈ ಸಮಸ್ಯೆಗಳ ಪರಿಹಾರಕ್ಕೆ ಪಂಚಾಯತಿಯಲ್ಲಿ ಲಭ್ಯವಿರುವ ಅನುದಾನ ಹಾಗು ಸಮಸ್ಯೆಗಳ ಆದ್ಯತೆಗಳಿಗನುಗುಣವಾಗಿ ಇತರ ಮೂಲಗಳಿಂದ ಅನುದಾನದ ಮೂಲ ಇತ್ಯಾದಿ ಕುರಿತು ಚರ್ಚೆ |
| 02.30 – 04.30 | ▪ ಊಟದ ವಿರಾಮದ ನಂತರ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಸಾರ್ವಜನಿಕರು ವಿವಿಧ ಇಲಾಖೆಗಳ ಕ್ಷೇತ್ರ ಸಿಬ್ಬಂದಿಯವರೊಡನೆ ಸದಸ್ಯರು ಈಗಾಗಲೇ ವಾರ್ಡ್‌ವಾರು ಪಟ್ಟಿ ಮಾಡಿದ ಸಮಸ್ಯೆಗಳ ಮಂಡನೆ. ಇದನ್ನು ಅಭಿವೃದ್ಧಿ ವಿಚಾರ ಸಂಕಿರಣಕ್ಕೆ ಹೋಲಿಸಬಹುದು.<br>▪ ಇದರೊಂದಿಗೆ ಸಾರ್ವಜನಿಕರು ಪೂರಕವಾಗಿ ಸ್ಥಳೀಯದಲ್ಲಿ ಗುರುತಿಸಿದ ಸಮಸ್ಯೆಗಳನ್ನು ಕೂಡ ಪಟ್ಟಿ ಮಾಡಲಾಯಿತು. ಈ ಸಮಸ್ಯೆಗಳಿಗೆ ಪಂಚಾಯತಿಯಿಂದ ನಿರೀಕ್ಷಿಸಿದ ಪರಿಹಾರ ಹಾಗು ಉಳಿದ ಸಮಸ್ಯೆಗಳಿಗೆ ನಿವಾರಣೆಗೆ ಅಗತ್ಯವಿರುವ ಅನುದಾನದ ಮೂಲ, ಪರಿಹಾರ ಕಂಡುಕೊಳ್ಳುವ ಬಗ್ಗೆ ಚರ್ಚಿಸಲಾಯಿತು. |

ಈ ಚಟುವಟಿಕೆಯಿಂದ ಕಂಡುಕೊಂಡ ಅಂಶಗಳು ಕೆಳಗಿನಂತಿವೆ.

- ಯೋಜನಾ ತಯಾರಿಕೆ ಹಂತದಲ್ಲಿ ಸದಸ್ಯರು ಆಯಾ ವಾರ್ಡ್‌ನ ಅಭಿವೃದ್ಧಿಗೆ ಸಂಬಂಧಿಸಿದಂತೆ ತಾವೇ ಕಾರ್ಯಕ್ರಮಗಳನ್ನು ನಿರ್ಧರಿಸದೇ ವಾರ್ಡ್ ಸಭೆಯಲ್ಲಿ ಜನಸಮುದಾಯ ಗುರುತಿಸುವ ಸಮಸ್ಯೆಗಳನ್ನು ಪಟ್ಟಿ ಮಾಡಿ, ಅದರಲ್ಲಿ ಆದ್ಯತೆ ಗುರುತಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
- ಜನಸಾಮಾನ್ಯರು ಎದುರಿಸುತ್ತಿರುವ ಸಣ್ಣ ಪುಟ್ಟ ಸಮಸ್ಯೆಗಳಾದ ಬೀದಿ ದೀಪ ಅಳವಡಿಕೆ, ಶುದ್ಧ ನೀರಿನ ಪೂರೈಕೆ, ಶಾಲೆಯ ಕೊಠಡಿಗಳ ದುರಸ್ತಿ, ಶಾಲೆಗೆ ಹಾಗು ಅಂಗನವಾಡಿಗೆ ಶೌಚಾಲಯ, ಮಳೆನೀರಿನ ಹಾನಿ ತಡೆಗಟ್ಟಲು ತೋಡಿಗೆ ಅಡ್ಡ ಕಲ್ಲು ಹಾಕುವುದು, ಕಾಲುಸಂಕಗಳ ನಿರ್ಮಾಣ ಇಂತಹ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿದೆ.
- ಸಮಾಜದಲ್ಲಿರುವ ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಸಮುದಾಯಕ್ಕೆ ತಿಳುವಳಿಕೆ ನೀಡುವಂತಹ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತಿಯು ಹಮ್ಮಿಕೊಳ್ಳಬೇಕು

- ಅನುದಾನದ ಅವಶ್ಯಕತೆಯಿರದ ಕೆಲವು ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತಿಯು ಸ್ಥಳೀಯ ಸಂಘ ಸಂಸ್ಥೆಗಳಿಂದ ನೆರವಿನಿಂದ ಅನುಷ್ಠಾನಗೊಳಿಸಬಹುದು
- ಪಂಚಾಯತಿ ವ್ಯಾಪ್ತಿಗೆ ಮೀರಿದ ಸಮಸ್ಯೆಗಳನ್ನು ಮೇಲ್ಹಂತದ ವ್ಯವಸ್ಥೆಯಿಂದ ಪಡೆಯಲು ಆ ಹಂತದ ಪ್ರತಿನಿಧಿಗಳ ಗಮನಕ್ಕೆ ತಂದು ಕ್ರಿಯಾ ಯೋಜನೆಯಲ್ಲಿ ಅಳವಡಿಸಲು ಪ್ರಯತ್ನ ನಡೆಸಬೇಕೆನ್ನುವ ಸ್ಪಷ್ಟ ಕಲ್ಪನೆ ಮೂಡಿ ಬರಲು ಸಾಧ್ಯವಾಯಿತು
- ವಿವಿಧ ಯೋಜನೆಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಇಲಾಖೆಗಳ ನೆರವನ್ನು ಪಡೆದು ಸ್ಥಳೀಯ ಜನರ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು
- ಕೇವಲ ಮೂಲಭೂತ ಸೌಕರ್ಯ ಒದಗಿಸಿದರೆ ಮಾತ್ರ ಸಾಲದು, ಸಮಸ್ಯೆಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚಿತವಾಗಿರುವ ಸ್ಥಾಯೀ ಸಮಿತಿಗಳಾದ ಉತ್ಪಾದನಾ, ಸೌಕರ್ಯ ಹಾಗು ಸಾಮಾಜಿಕ ನ್ಯಾಯ ಸಮಿತಿಗಳನ್ನು ಕ್ರಿಯಾಶೀಲಗೊಳಿಸಿ ಅದರ ಮೂಲಕ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು ಅವಶ್ಯವಾಗಿದೆ. ಈ ಪ್ರಾಯೋಗಿಕ ಅನುಭವದ ನಂತರ ತರಬೇತಿದಾರರ ತರಬೇತಿ ವಿನ್ಯಾಸವನ್ನು ರಚಿಸಲು ಕ್ರಮ ಕೈಗೊಳ್ಳಲಾಯಿತು.

## 4) ತರಬೇತಿದಾರರ ತರಬೇತಿಯಲ್ಲಿ ಅಭಿವೃದ್ಧಿ ಯೋಜನಾ ತಯಾರಿಕೆ ಕುರಿತು ವಿನ್ಯಾಸ ಅಳವಡಿಕೆ ಹಾಗು ಕ್ಷೇತ್ರ ಪ್ರಯೋಗದ ಅನುಭವ :–

ಮರವಂತೆಯಲ್ಲಿ ಪಡೆದ ಪ್ರಾಯೋಗಿಕ ಅನುಭವದ ಮೇರೆಗೆ, ಜುಲೈ ಹಾಗು ಆಗಸ್ಟ್ 2005ರಲ್ಲಿ ರಾಜ್ಯದ 4 ವಲಯಗಳಾದ ಗುಲ್ಬರ್ಗ, ಬೆಂಗಳೂರು, ಬೆಳಗಾಂ ಮತ್ತು ಮೈಸೂರು ಜಿಲ್ಲೆಗಳಲ್ಲಿ ತರಬೇತಿದಾರರ ತರಬೇತಿ ನಡೆಸಲಾಯಿತು. ತರಬೇತಿಯ ಅವಧಿಯು ಒಟ್ಟು 5 ದಿನಗಳಾಗಿದ್ದು ಅದರಲ್ಲಿ ಒಂದು ದಿನವನ್ನು ತರಬೇತಿದಾರರು ಕ್ಷೇತ್ರ ಅಧ್ಯಯನ ನಡೆಸುವ ಮೂಲಕ ಅಭಿವೃದ್ಧಿ ಮುನ್ನೋಟ ತಯಾರಿಕೆ ಪ್ರಕ್ರಿಯೆ ಕುರಿತು ಮಾಹಿತಿ ಪಡೆಯಲು ವ್ಯವಸ್ಥೆ ಮಾಡಲಾಯಿತು.

ಅಭಿವೃದ್ಧಿ ವಿನ್ಯಾಸ ತಯಾರಿಕೆಯ ಅನುಭವ ಪಡೆಯಲು ಮೀಸಲಿಟ್ಟ ವೇಳಾಪಟ್ಟಿ ಈ ಕೆಳಕಂಡಂತಿದೆ.

| ದಿನ – 4 | | |
|---|---|---|
| ಸಮಯ | ವಿಷಯ | ವಿವರ |
| 09.00 – 06.00 | **ಕ್ಷೇತ್ರ ಅಧ್ಯಯನ** | **ಕ್ಷೇತ್ರ ಅಧ್ಯಯನದ ಚಟುವಟಿಕೆಯ ವಿವರ**<br>1. 4 ತಂಡಗಳಲ್ಲಿ 4 ಗ್ರಾಮ ಪಂಚಾಯತಿಗಳಿಗೆ ಭೇಟಿ<br>2. ಪ್ರತಿ ಗುಂಪನ್ನು 3 ಉಪ ಗುಂಪುಗಳಾಗಿ ವಿಂಗಡಿಸುವುದು<br>• ಉತ್ಪಾದನಾ ವಲಯ<br>• ಮೂಲಭೂತ ಸೌಕರ್ಯ<br>• ಸಾಮಾಜಿಕ ನ್ಯಾಯ<br>3. ಮೊದಲಿಗೆ ಪಿ.ಆರ್.ಎ. ಚಟುವಟಿಕೆಯನ್ನು ಪ್ರತ್ಯೇಕ ಗುಂಪುಗಳಲ್ಲಿ ನಡೆಸುವುದು.<br>4. ನಂತರ ಮೂರು ವಲಯಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಗ್ರಾಮಸ್ಥರೊಂದಿಗೆ ಕೇಂದ್ರಿಕೃತ ಗುಂಪು ಚರ್ಚೆ ನಡೆಸುವುದು<br>5. ಮಧ್ಯಾಹ್ನದವರೆಗೆ ಮೂರು ವಲಯಗಳಲ್ಲಿ ಯಾವುದಾದರೊಂದು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಮುನ್ನೋಟವನ್ನು ಪ್ರತ್ಯೇಕವಾಗಿ ಸಿದ್ಧಪಡಿಸುವುದು. ಈ ಸಂಧರ್ಭದಲ್ಲಿ ಆ ಗ್ರಾಮ ಪಂಚಯತಿಯಲ್ಲಿರುವ ವಾರ್ಡ್‌ಗಳಿಗನುಗುಣವಾಗಿ ಅಭಿವೃದ್ಧಿ ಮುನ್ನೋಟವನ್ನು ಸಿದ್ಧಪಡಿಸುವುದು.<br>6. ಊಟದ ವಿರಾಮದ ನಂತರ ಗ್ರಾಮ ಪಂಚಾಯತಿ ವಾಸ್ತವ ಸ್ಥಿತಿಗತಿಯ ಕುರಿತು ಅಧ್ಯಯನ |

| ದಿನ – 5 | | |
|---|---|---|
| 09.30 – 10.00 | ಪುನರ್ಮನನ | ಹಿಂದಿನ ದಿನದ ಚಟುವಟಿಕೆಗಳ ಪುನರ್ಮನನ ಹಾಗು ವರದಿಯ ಮಂಡನೆ |
| 10.00 – 12.30 | ಕ್ಷೇ.ಅಧ್ಯಯನದ ಮಂಡನೆ | ಕ್ಷೇತ್ರ ಅಧ್ಯಯನಲ್ಲಿ ಗಮನಿಸಿದ ಅಂಶಗಳನ್ನು ಚಾರ್ಟುಗಳಲ್ಲಿ ದಾಖಲಿಸಿ ಮಂಡನೆ ಹಾಗು ವಿಶ್ಲೇಷಣೆ |

ಈ ಪ್ರಾಯೋಗಿಕ ಅನುಭವವು ತರಬೇತಿದಾರರಿಗೆ ಗ್ರಾಮದಲ್ಲಿ ವಿವಿಧ ವರ್ಗದವರು ವಾಸಿಸುವ ಸ್ಥಳ, ಎದುರಿಸುತ್ತಿರುವ ಸಮಸ್ಯೆಗಳು, ಇನ್ನೂ ಆಚರಣೆಯಲ್ಲಿರುವ ಅಸ್ಪೃಶ್ಯತೆ, ವಿವಿಧ ಜನಾಂಗದ ನಡುವಿನ ಅಸಮಾನತೆ ಇತ್ಯಾದಿಯನ್ನು ಅಭ್ಯಸಿಸಲು ಹಾಗು ವಿಶ್ಲೇಷಿಸಲು ಸದವಕಾಶ ದೊರೆಯಿತು. ಗ್ರಾಮ ಪಂಚಾಯತಿ ಸದಸ್ಯರು ಹಾಗು ಸಮುದಾಯದ ಜನರೊಂದಿಗೆ ನಡೆಸಿದ ಕೇಂದ್ರಿಕೃತ ಗುಂಪು ಚರ್ಚೆಯು ಗ್ರಾಮ ಪಂಚಾಯತಿ ತಾನು ನಿರ್ವಹಿಸಬೇಕಾದ ಜವಾಬ್ದಾರಿಯ ಕುರಿತು ಅರಿವು ಮೂಡಿಸುವಂತಹ ಪ್ರಯತ್ನವೆಂದೇ ಹೇಳಬಹುದು.

ಈ ಚಟುವಟಿಕೆಯನ್ನು ಆಧಾರವಾಗಿಟ್ಟುಕೊಂಡು, ಗ್ರಾಮ ಪಂಚಾಯತ್ ಸದಸ್ಯರಿಗೆ 2ನೇ ಕಂತಿನ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಮುನ್ನೋಟ ತಯಾರಿಕೆ ಕಾರ್ಯಕ್ರಮವನ್ನು ತರಬೇತಿಯ ವಿಷಯವಾಗಿ ಅಳವಡಿಸಲಾಯಿತು. ತರಬೇತಿಯ ಅವಧಿಯು 3 ದಿನಗಳಾಗಿದ್ದು, ಒಟ್ಟು 26 ಪ್ರಸರಣಗಳ ಮೂಲಕ 90,452 ಸದಸ್ಯರಿಗೆ ತರಬೇತಿ ನೀಡಲು ಕಾರ್ಯಕ್ರಮ ರೂಪಿಸಲಾಯಿತು.

ಆಗಸ್ಟ್ 2005ರಿಂದ ಏಪ್ರಿಲ್ 2006ರವರೆಗೆ ನಡೆಸುವ ಈ ತರಬೇತಿಯಲ್ಲಿ ಒಂದು ದಿನದ ಅವಧಿಯನ್ನು ಅಭಿವೃದ್ಧಿ ಮುನ್ನೋಟ ತಯಾರಿಕೆ ಪ್ರಕ್ರಿಯೆ ಕುರಿತು ಅರಿವು ಮೂಡಿಸಲೆಂದೇ ಮೀಸಲಿರಿಸಲಾಗಿತ್ತು. ಉಪಗ್ರಹ ಆಧಾರಿತ ತರಬೇತಿಯ ವಿನ್ಯಾಸದ ವೇಳಾಪಟ್ಟಿಯು ಈ ಕೆಳಕಂಡಂತಿದೆ.

## 5) ಗ್ರಾಮ ಪಂಚಾಯತಿ ಸದಸ್ಯರ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಮುನ್ನೋಟ ತಯಾರಿಕೆ ಕುರಿತಾದ ತರಬೇತಿ ವಿನ್ಯಾಸ ರಚನೆ :–

| ದಿನ – 2 | | |
|---|---|---|
| **ಸಮಯ** | **ವಿಷಯ** | **ವಿವರಣೆ** |
| 09.30 – 10.00 | ಹಿಂದಿನ ದಿನದ ಚಟುವಟಿಕೆ/ ಕಲಿಕೆಯ ಪುನರ್ಮನನ | ಸ್ಥಳೀಯ ಚಟುವಟಿಕೆ |
| 10.00 – 10.30 | ಗ್ರಾಮ ಪಂಚಾಯತಿಯ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿ ಮತ್ತು ಅನುಷ್ಠಾನ<br>• ಗ್ರಾಮ ಪಂಚಾಯತಿ ಯೋಜನಾ ನಕ್ಷೆ ಸಿದ್ಧಪಡಿಸುವ ಕುರಿತು ಮಾಹಿತಿ | ಶ್ರೀ. ಹಿರೇಮಠ್, ನಿರ್ದೇಶಕರು (ಮೂ.ಭೂ) ಗ್ರಾ.ಅ.ಮತ್ತು ಪಂ.ರಾ.ಇಲಾಖೆ, ಬೆಂಗಳೂರು ಇವರಿಂದ ವಿಷಯ ಮಂಡನೆ – ಉಪಗ್ರಹ ಪ್ರಸಾರ |
| 10.30 – 11.15 | ಸಮಗ್ರ ಸಂಪನ್ಮೂಲ ನಕ್ಷೆ ಸಿದ್ಧಪಡಿಸುವುದು | **ಸ್ಥಳೀಯ ಚಟುವಟಿಕೆ** : ಗ್ರಾಮ ಪಂಚಾಯತಿಯ ನಕ್ಷೆಯನ್ನು ಮುಂದಿಟ್ಟುಕೊಂಡು ಸಣ್ಣ ಗುಂಪುಗಳಲ್ಲಿ ಆ ಪಂಚಾಯತಿಗೆ ಸಂಬಂದಪಟ್ಟ ಸಂಪನ್ಮೂಲ ನಕ್ಷೆ ಬಿಡಿಸುವುದು (ಈ ನಕ್ಷೆಯಲ್ಲಿ ಗ್ರಾಮ ಪಂಚಾಯತಿಯ ಭೌಗೋಳಿಕ ಹಾಗು ಸಾಮಾಜಿಕ ಪರಿಸ್ಥಿತಿಯನ್ನು ಆಧಾರ ವಾಗಿಟ್ಟುಕೊಂಡು ಕೃಷಿ ಪದ್ಧತಿ, ಕುಡಿಯುವ ನೀರು, ನೈರ್ಮಲ್ಯ ಕಾರ್ಯಕ್ರಮಗಳು, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ ಇತ್ಯಾದಿ ಕ್ಷೇತ್ರಗಳ ವಾಸ್ತವಿಕ ಅಂಶಗಳನ್ನು ಗುರುತಿಸಿ, ದಾಖಲಿಸುವುದು. ಈ ಕ್ಷೇತ್ರದ ಅವಶ್ಯಕತೆಗಳನ್ನು ಆದ್ಯತೆಗಳಿಗನುಗುಣವಾಗಿ ಪಟ್ಟಿ ಮಾಡುವುದು) |

| | | |
|---|---|---|
| 11.15 – 11.30 | ಟೀ ವಿರಾಮ | |
| 11.30 – 12.00 | ಸಂಪನ್ಮೂಲ ನಕ್ಷೆಯ ಮಂಡನೆ | **ಸ್ಥಳೀಯ ಚಟುವಟಿಕೆ** : ಗುಂಪುಗಳಲ್ಲಿ ಸಿದ್ಧಪಡಿಸಿದ ಸಂಪನ್ಮೂಲ ನಕ್ಷೆಗಳನ್ನು ಮಂಡಿಸುವುದು |
| 12.00 – 12.25 | ಜನಾಂದೋಲನ ಯೋಜನೆ – ವಿಕೇಂದ್ರಿಕರಣದಲ್ಲಿ ಮುನ್ನಡೆ ಸಾಧಿಸಿದ ಕೇರಳದ ಪ್ರಯೋಗ | ವಿಕೇಂದ್ರಿಕೃತ ಯೋಜನೆ ತಯಾರಿಸುವಲ್ಲಿ ಕೇರಳ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾದ ಜನಾಂದೋಲನದ ಯೋಜನೆಯ ಪ್ರಮುಖ ಅಂಶಗಳು – ಶ್ರೀ.ಹೆಚ್.ಎಸ್.ಅಶೋಕಾನಂದ್‌ರವರಿಂದ ವಿಷಯ ಮಂಡನೆ |
| 12.25 – 12.45 | ಕೇರಳ ಪ್ರಯೋಗದ ಕುರಿತು ಚರ್ಚೆ | ಸಂಪನ್ಮೂಲ ವ್ಯಕ್ತಿಗಳು ಕೇರಳ ಪ್ರಯೋಗದ ಸಾಧಕ ಬಾಧಕಗಳ ಕುರಿತು ಕೆಲವು ಉದಾಹರಣೆಗಳ ಮೂಲಕ ಮಾಹಿತಿ ನೀಡಬೇಕು |
| 12.45 – 01.30 | ಪ್ರಶ್ನೋತ್ತರ ಕಾರ್ಯಕ್ರಮ | ಉಪಗ್ರಹ ಪ್ರಸರಣ |
| 01.30 – 02.30 | ಊಟದ ವಿರಾಮ | |
| 02.30 – 03.00 | ಅಂಗೈಯಲಿ ಅರಮನೆ – ಕಿರುಚಿತ್ರ ಪ್ರಸರಣ | ಉಪಗ್ರಹ ಪ್ರಸರಣ |
| 03.00 – 03.15 | ತ್ವರಿತ ಪ್ರತಿಕ್ರಿಯೆ | ಸ್ಥಳೀಯ ಚಟುವಟಿಕೆ |
| 03.15 – 04.00 | ಪಂಚವಾರ್ಷಿಕ ಯೋಜನೆ ಸಿದ್ಧಪಡಿಸುವುದು | **ಸ್ಥಳೀಯ ಚಟುವಟಿಕೆ** – ಗ್ರಾಮ ಪಂಚಾಯತಿಗಳು ಸಮಗ್ರವಾದ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವುದು ತರಬೇತಿಯ ಸೀಮಿತ ಅವಧಿಯಲ್ಲಿ ಸಾಧ್ಯವಾಗದ ಕಾರಣ 3 ವಲಯಗಳಿಗೆ ಸಂಬಂಧಿಸಿದಂತೆ ಯಾವುದಾದರೊಂದು ಒಂದೊಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಪಂಚವಾರ್ಷಿಕ ಯೋಜನೆ ಸಿದ್ಧಪಡಿಸಲು ಸಂಪನ್ಮೂಲ ವ್ಯಕ್ತಿಗಳು ಸಹಾಯ ಮಾಡಬೇಕು |
| 04.00 – 04.15 | ಟೀ ವಿರಾಮ | |
| 04.15 – 04.45 | ಸಿದ್ಧಪಡಿಸಿದ ಯೋಜನೆಯ ಮಂಡನೆ | ಸ್ಥಳೀಯ ಚಟುವಟಿಕೆ |
| 04.45 – 05.30 | ಪ್ರಶ್ನೋತ್ತರ ಕಾರ್ಯಕ್ರಮ | ಉಪಗ್ರಹ ಪ್ರಸರಣ |

## 6) ತರಬೇತಿ ಉಪಯುಕ್ತತೆಯ ಕುರಿತು ಹಿಮ್ಮಾಹಿತಿ :–

ತರಬೇತಿ ವಿನ್ಯಾಸ ರೂಪಿಸಿ, ತರಬೇತಿಯನ್ನು ಗ್ರಾಮ ಪಂಚಾಯತಿ ಸದಸ್ಯರಿಗೆ ನೀಡಲು ಪ್ರಾರಂಭಿಸಿದ 5–6 ಪ್ರಸರಣಗಳ ನಂತರ ಗ್ರಾಮ ಪಂಚಾಯತಿ ಸದಸ್ಯರಿಗೆ ಅಭಿವೃದ್ಧಿ ಪರಿಕಲ್ಪನೆಯ ಮಹತ್ವ ಅರ್ಥವಾಗಿದೆಯೇ ಇಲ್ಲವೇ ಎಂಬುದರ ಕುರಿತು ಹಿಮ್ಮಾಹಿತಿ ಪಡೆಯಲಾಯಿತು. ಹಿಮ್ಮಾಹಿತಿಯ ನಂತರ ತರಬೇತಿ ವಿನ್ಯಾಸಕ್ಕೆ ಬದಲಾವಣೆ ತರುವಂತಹ ಅನಿವಾರ್ಯತೆ ಸೃಷ್ಠಿಯಾಯಿತು. ಅನಿವಾರ್ಯತೆಯ ಹಿಂದಿರುವ ಕಾರಣಗಳ ವಿವರ ಈ ಕೆಳಕಂಡಂತಿದೆ.

1. ಸಂಸ್ಥೆಯಲ್ಲಿ ದಿ॥ 27.09.05 ಹಾಗು ದಿ॥ 28.09.05ರಂದು ಎರಡು ದಿನಗಳ ಚಿಂತನ-ಮಂಥನ ಕಾರ್ಯಾಗಾರದಲ್ಲಿ ವ್ಯಕ್ತವಾದ ಅಂಶವೆಂದರೆ, ರಾಜ್ಯದ ಈಶಾನ್ಯ ಭಾಗದ ಜಿಲ್ಲೆಗಳ ತರಬೇತಿ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಸದಸ್ಯರಿಗೆ ಅಭಿವೃದ್ಧಿ ಮುನ್ನೋಟ ತಯಾರಿಕೆ ಪ್ರಕ್ರಿಯೆಯ ಮಾಹಿತಿಯು ಪರಿಪೂರ್ಣವಾಗಿ ಅರ್ಥವಾಗುತ್ತಿಲ್ಲವೆಂದು ತಿಳಿಸುತ್ತಾ, ವಿನ್ಯಾಸವನ್ನು ಸರಳ ರೂಪಕ್ಕೆ ತರುವುದು ಸೂಕ್ತವೆಂದು ಅಭಿಪ್ರಾಯ ಪಡೆಯಲಾಯಿತು.

2. ಕೆಲ ಸಂಪನ್ಮೂಲ ವ್ಯಕ್ತಿಗಳು ಆಗಾಗ್ಗೆ ದೂರವಾಣಿ/ ಹಾಗು ಮೌಖಿಕವಾಗಿ ಸಂಸ್ಥೆಯ ಸಲಹೆಗಾರರು ಮತ್ತು ಬೋಧಕರೊಂದಿಗೆ ಚರ್ಚಿಸುವಾಗ ಅಭಿವೃದ್ಧಿ ಮುನ್ನೋಟ ತಯಾರಿಕೆ ಪ್ರಕ್ರಿಯೆ ಚಟುವಟಿಕೆಯನ್ನು ಅರ್ಥಪೂರ್ಣವಾಗಿ ನಡೆಸುವಂತಹ ಸ್ಪಷ್ಟತೆ ಸಂಪನ್ಮೂಲ ವ್ಯಕ್ತಿಗಳಿಗೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಹೀಗಾಗಿ ಗ್ರಾಮ ಪಂಚಾಯತ್ ಸದಸ್ಯರಿಗೆ ಈ ವಿಷಯದ ಕುರಿತು ಮನದಟ್ಟು ಮಾಡಿಕೊಡಲು ಸಾದ್ಯವಾಗುತ್ತಿಲ್ಲವೆಂಬ ಅಂಶವನ್ನು ಸಹ ಅವರು ಹೊರಗೆಡವಿರುತ್ತಾರೆ.

3. ಗ್ರಾಮ ಪಂಚಾಯತ್ ಸದಸ್ಯರಿಗೆ ಉಪಗ್ರಹ ಪ್ರಸರಣದ ಪ್ರಶ್ನೋತ್ತರ ಅವಧಿಯಲ್ಲಿ ವಿಷಯ ನಿರೂಪಕರಾಗಿ ಕೆಲಸ ನಿರ್ವಹಿಸುವಾಗ ಈ ಅಧಿವೇಶನದಲ್ಲಿ ಕೈಗೊಂಡ ಚಟುವಟಿಕೆಗೆ ಪೂರಕವಾಗಿ ಸಾಕಷ್ಟು ಪ್ರಶ್ನೆಗಳು ಬರದಿರುವ ಬಗ್ಗೆ ಗಮನಿಸಲಾಯಿತು. ಅಭಿವೃದ್ಧಿ ಮುನ್ನೋಟ ತಯಾರಿಕೆಗೆ ಸಂಬಂಧಿಸಿದಂತೆ ಬರುತ್ತಿದ್ದ ಪ್ರಶ್ನೆಗಳು ಕಡಿಮೆಯಾಗಿದ್ದು, ಅಧಿವೇಶನಕ್ಕೆ ಸಂಬಂಧಪಡದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಸದಸ್ಯರು ಮಾಡುತ್ತಿರುವುದನ್ನು ಗಮನಿಸಿದಾಗ ಈ ಚಟುವಟಿಕೆಯು ಸಾಕಷ್ಟು ಆಸಕ್ತಿದಾಯಕವಲ್ಲದ ಕಾರಣದಿಂದಲೋ, ಅಥವಾ ಅರ್ಥವಾಗದ ಕಾರಣದಿಂದಲೋ ಈ ರೀತಿಯ ಸಮಸ್ಯೆ ಸೃಷ್ಟಿಯಾಗಿರಬಹುದು ಎಂದು ಸುಲಭವಾಗಿ ಅರ್ಥೈಸಬಹುದಾಗಿತ್ತು.

ಮೇಲ್ಕಂಡ ಎಲ್ಲಾ ಕಾರಣಗಳಿಂದ ಈ ಅಧಿವೇಶನವನ್ನು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ನಡೆಸಬೇಕಾದರೆ ಗ್ರಾಮ ಪಂಚಾಯತಿ ಸದಸ್ಯರಿಗೆ ಸರಳ ರೀತಿಯಲ್ಲಿ ವಿಷಯವನ್ನು ಮುಟ್ಟಿಸುವ ಪ್ರಯತ್ನ ಮಾಡಬೇಕೆಂಬುದನ್ನು ಮನಗಾಣಲಾಯಿತು. ಚಿಂತನ-ಮಂಥನ ಕಾರ್ಯಾಗಾರದಲ್ಲಿ ಮೂಡಿಬಂದ ಸಲಹೆಯಂತೆ ರಾಜ್ಯದ ಹಿಂದುಳಿದ ಭಾಗದ ಜಿಲ್ಲೆಯಾದ ಗುಲ್ಬರ್ಗಾ ಜಿಲ್ಲೆಯ ಆಯ್ದ ಕೆಲವು ಗ್ರಾಮ ಪಂಚಾಯತಿಗಳ ಸದಸ್ಯರಿಗೆ ಪ್ರಾಯೋಗಿಕ ತರಬೇತಿ ನೀಡುವುದರ ಮೂಲಕ ತರಬೇತಿ ವಿನ್ಯಾಸವನ್ನು ಮನರ್ರಚಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಯಿತು. ಗುಲ್ಬರ್ಗಾ ಜಿಲ್ಲೆಯ ಶಹಾಮರ, ಚಿತಾಮರ ಹಾಗು ಯಾದ್‌ಗೀರ್ ತಾಲ್ಲೂಕುಗಳ 6 ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಕ್ಷೇತ್ರ ಪ್ರಯೋಗ ನಡೆಸಲು ಕಾರ್ಯಕ್ರಮವನ್ನು ಈ ಕೆಳಕಂಡಂತೆ ರೂಪಿಸಲಾಯಿತು. ಕ್ಷೇತ್ರ ಪ್ರಯೋಗವನ್ನು ರಾಜ್ಯದ 4 ವಲಯಗಳಿಂದ ಆಯ್ಕೆ ಮಾಡಿದ 8 ಸಂಪನ್ಮೂಲ ವ್ಯಕ್ತಿಗಳೊಂದಿಗೆ ನಡೆಸಲಾಯಿತು. ಈ ಪ್ರಯೋಗದಲ್ಲಿ ಪಾಲ್ಗೊಂಡ ಸಂಪನ್ಮೂಲ ವ್ಯಕ್ತಿಗಳು ಹಾಗು ಭೇಟಿ ನೀಡಿದ ಗ್ರಾಮ ಪಂಚಾಯತಿಗಳ ವಿವರ ಈ ಕೆಳಕಂಡಂತಿದೆ.

## 7) ಅಭಿವೃದ್ಧಿ ಮುನ್ನೋಟ ತಯಾರಿಕೆಗೆ ಸಂಬಂಧಿಸಿದಂತೆ ಕ್ಷೇತ್ರ ಪ್ರಯೋಗ ನಡೆಸಿ ಪ್ರಾಯೋಗಿಕ ಅನುಭವ ಪಡೆಯಲು ಗುಲ್ಬರ್ಗ ಜಿಲ್ಲೆಗೆ ನೀಡಿದ ಭೇಟಿಯ ವಿವರಣೆ :-

### (ಅ) ಕ್ಷೇತ್ರ ಪ್ರಯೋಗ ನಡೆಸಿದ ಗ್ರಾಮ ಪಂಚಾಯತಿಗಳ ಪಟ್ಟಿ :-

ಗುಲ್ಬರ್ಗ ಜಿಲ್ಲೆಯು ಈಶಾನ್ಯ ಭಾಗದ ಹಿಂದುಳಿದ ಜಿಲ್ಲೆಯಾಗಿದ್ದು, ಅಲ್ಲಿಯೇ ಅಧ್ಯಯನ ನಡೆಸಲು ಕ್ರಮ ಕೈಗೊಳ್ಳಲಾಯಿತು. ಈ ಜಿಲ್ಲೆಯ 3 ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿ ಎರಡು ಪಂಚಾಯತಿಗಳನ್ನು ಆಯ್ಕೆ ಮಾಡಲಾಯಿತು. ಈ ತಾಲ್ಲೂಕುಗಳಲ್ಲಿ ತಾಲ್ಲೂಕು ಕೇಂದ್ರದಿಂದ ದೂರವಿರುವ ಹಾಗು ಹಿಂದುಳಿದ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲಾಯಿತು. ವಿವರಣೆ ಈ ಕೆಳಕಂಡಂತಿದೆ.

| ಕ್ರ.ಸಂ. | ತಾಲ್ಲೂಕುಗಳ ಹೆಸರು | ಗ್ರಾಮ ಪಂಚಾಯತಿಗಳ ಹೆಸರು | ಭೇಟಿ ನೀಡಿದ ದಿನಾಂಕ |
|---|---|---|---|
| 1 | ಸುರಮರ | ಕಾಡಮಗೇರ ಹಾಗು ಚಟ್ನಳ್ಳಿ | 18.10.05 |
| 2 | ಚಿತಾಮರ | ಕೊಲ್ಲೂರು ಹಾಗು ಇಂಗಳಗಿ | 19.10.05 |
| 3 | ಯಾದ್‌ಗೀರ್ | ಕಾಳಬೆಳಗುಂದಿ ಹಾಗು ಹಳಗೇರ | 20.10.05 |

(ಆ) 3 ದಿನಗಳಲ್ಲಿ ನಡೆಸಿದ ಪ್ರಯೋಗದ ವಿವರ :

| ದಿನ – 1 (18.10.05) | |
|---|---|
| **ಸಮಯ** | **ವಿವರಣೆ** |
| 09.30 – 10.15 | ಬೆಳಗಿನ ಉಪಹಾರದ ನಂತರ ಕಾಡಮಗೇರ ಹಾಗು ಚಟ್ನಳ್ಳಿ ಗ್ರಾಮ ಪಂಚಾಯತಿಗಳಿಗೆ ಪ್ರಯಾಣ |
| 10.15 – 11.00 | ಕಾಡಮಗೇರ ಗ್ರಾಮ ಪಂಚಾಯತಿಯಲ್ಲಿ ಗ್ರಾಮಸ್ಥರು, ಕಛೇರಿ ಸಿಬ್ಬಂದಿ ಹಾಗು ಸದಸ್ಯರೊಡನೆ ಬೇಟಿಯ ಉದ್ದೇಶದ ಮನವರಿಕೆ |
| 11.00 – 02.00 | ಪ್ರಾರಂಭದಲ್ಲಿ ಯೋಜನೆ ತಯಾರಿಕೆಯ ಉದ್ದೇಶ, ಸದಸ್ಯರಾಗಿ ಗ್ರಾಮದ ಸಮಸ್ಯೆಗಳನ್ನು ಪರಿಹರಿಸುವ ರೀತಿ, ಜನರ ಆಶೋತ್ತರಗಳಿಗೆ ಸ್ಪಂದಿಸುವ ಬಗೆ ಇತ್ಯಾದಿ ವಿಷಯಗಳ ಕುರಿತು ಬ್ರೇನ್ ಸ್ಟ್ರಾಮಿಂಗ್ ಚಟುವಟಿಕೆಯ ಮೂಲಕ ಸದಸ್ಯರ ಅಭಿಪ್ರಾಯಗಳನ್ನು ಪಟ್ಟಿ ಮಾಡಲಾಯಿತು.<br>▪ ಕಾಡಮಗೇರ ಗ್ರಾಮ ಪಂಚಾಯತಿಯು 3 ಗ್ರಾಮಗಳು ಹಾಗು 16 ಸದಸ್ಯರನ್ನು ಹೊಂದಿರುವ ಗ್ರಾಮ ಪಂಚಾಯತಿ. ಸಂಪನ್ಮೂಲ ವ್ಯಕ್ತಿಗಳಿ 3 ತಂಡಗಳಲ್ಲಿ ಸದಸ್ಯರನ್ನು ವೃತ್ತಾಕಾರವಾಗಿ ಕುಳಿತು ಕೊಳ್ಳುವಂತೆ ಮಾಡಿ ಅವರ ಗ್ರಾಮದಲ್ಲಿ ಎದುರಿಸುತ್ತಿರುವ ವೈಯುಕ್ತಿಕ ಸಮಸ್ಯೆಗಳನ್ನು ಪಟ್ಟಿ ಮಾಡುವಂತೆ ತಿಳಿಸಲಾಯಿತು..<br>▪ 3 ತಂಡಗಳಲ್ಲಿ ಸದಸ್ಯರು ದಾಖಲಿಸಿದ ಎಲ್ಲಾ ಸಮಸ್ಯೆಗಳನ್ನು ಚಾರ್ಟನಲ್ಲಿ ಕ್ರೋಢೀಕರಿಸಲಾಯಿತು. ಒಂದೇ ರೀತಿಯ ಸಮಸ್ಯೆ 3–5 ಬಾರಿ ಪುನರಾವರ್ತನೆಯಾಗಿದ್ದರೆ, ಆ ಸಮಸ್ಯೆಯ ಮುಂದೆ ಆ ಸಮಸ್ಯೆ ಎಷ್ಟು ಬಾರಿ ದಾಖಲಾಗಿದೆ ಎಂಬುದರ ಕುರಿತು ಸಂಖ್ಯೆಯನ್ನು ಹಾಕಲಾಯಿತು.<br>▪ ನಂತರ ಗ್ರಾಮ ಪಂಚಾಯತಿಯ ರಚಿತವಾಗಿರುವ 3 ಸ್ಥಾಯೀ ಸಮಿತಿಗಳಾದ ಉತ್ಪಾದನಾ, ಸಾಮಾಜಿಕ ಹಾಗು ಮೂಲಭೂತ ಸೌಕರ್ಯಸಮಿತಿಗಳ ಕುರಿತು ಮಾಹಿತಿ ನೀಡಿ, ಕ್ರೋಢೀಕರಿಸಿದ ಸಮಸ್ಯೆಗಳನ್ನು 3 ವಲಯಗಳಲ್ಲಿ ಸದಸ್ಯರಿಂದಲೇ ಕ್ರೋಢೀಕರಿಸಲಾಯಿತು.<br>▪ ಸಮಸ್ಯೆಗಳ ಪಟ್ಟಿ ಮಾಡುವಾಗ ಸದಸ್ಯರ ಗಮನವೆಲ್ಲವೂ ಮೂಲಭೂತ ಸೌಕರ್ಯಗಳಿಗೆ ಸೀಮಿತವಾದಾಗ ಸಂಪನ್ಮೂಲ ವ್ಯಕ್ತಿಗಳು ಚರ್ಚೆಯನ್ನು ಕೈಗೆತ್ತಿಕೊಳ್ಳುವ ಮೂಲಕ ಉತ್ಪಾದನಾ ಹಾಗು ಸಾಮಾಜಿಕ ಅಭಿವೃದ್ಧಿ ವಲಯಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕಡೆ ಗಮನ ಸೆಳೆದು ಆ ಕ್ಷೇತ್ರಗಳ ಸಮಸ್ಯೆಗಳನ್ನು ಸಹ ಚಾರ್ಟನಲ್ಲಿ ಪಟ್ಟಿ ಮಾಡಿದರು. |
| 2.00 – 03.00 | ಊಟದ ವಿರಾಮ |
| 03.00 – 05.00 | ಮಧ್ಯಾಹ್ನ ಅಧಿವೇಶನದಲ್ಲಿ ಸದಸ್ಯರ ತಂಡವನ್ನು ಎರಡು ತಂಡಗಳಾಗಿ ವಿಭಾಗಿಸಲಾಯಿತು. ಈ ಎರಡು ತಂಡಗಳು ಚಾರ್ಟನಲ್ಲಿ ದಾಖಲಿಸಿದ ಯಾವುದಾದರೊಂದು ಸಮಸ್ಯೆಯನ್ನು ಆಯ್ಕೆ ಮಾಡುವಂತೆ ತಿಳಿಸಿ ಆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮುಂದಿನ 5 ವರ್ಷಗಳಿಗೆ ಸಂಬಂಧಿಸಿದಂತೆ ಯೋಜನೆ ರೂಪಿಸಲು ಅನುವಾಗುವಂತೆ ಕೆಲವು ಸೂಚನೆಗಳನ್ನು. ನೀಡಲಾಯಿತು. ಒಂದು ತಂಡ ನೈರ್ಮಲ್ಯ ಕಾರ್ಯಕ್ರಮ ಆಯ್ಕೆ ಮಾಡಿದರೆ ಇನ್ನೊಂದು ತಂಡ ಶಿಕ್ಷಣ ಕಾರ್ಯಕ್ರಮ ಆಯ್ಕೆ ಮಾಡಿತು.<br>ಈ ಎರಡೂ ತಂಡಗಳು ಚಾರ್ಟುಗಳಲ್ಲಿ ಮೊದಲಿಗೆ ಗ್ರಾಮ ಪಂಚಾಯತಿಯ ನಕ್ಷೆಯನ್ನು ಬಿಡಿಸುವಂತೆ ಸೂಚಿಸಿ, ಅದರಲ್ಲಿ ಗ್ರಾಮದಲ್ಲಿ ಹಾದು ಹೋಗುವ ಪ್ರಮುಖ ರಸ್ತೆಗಳು, ಶಾಲಾ, ಅಂಗನವಾಡಿ ಹಾಗು ಗ್ರಾಮ ಪಂಚಾಯತಿ ಕಟ್ಟಡಗಳು, ನೀರು ಪೂರೈಕೆಯ ಕಾರ್ಯಕ್ರಮಗಳು, ದೇವಸ್ಥಾನ ಹೀಗೆ ಪ್ರಮುಖ ಅಂಶಗಳನ್ನು ಚಾರ್ಟನಲ್ಲಿ ಗುರುತು ಮಾಡುವಂತೆ ತಿಳಿಸಲಾಯಿತು.<br>ನಂತರ ಮುಂದಿನ 5 ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವ ರೀತಿಯ ಕಾರ್ಯಕ್ರಮಗಳನ್ನು ಅಳವಡಿಸಬಹುದು ಎಂಬುದರ ಬಗ್ಗೆ ನಕ್ಷೆಯಲ್ಲಿ ನಮೂದಿಸುವಂತೆ ತಿಳಿಸಿದರು. ಅದೇ ರೀತಿ ಶಾಲೆಗೆ ಬೇಕಾಗಿರುವ ಹೆಚ್ಚುವರಿ ಕೊಠಡಿಗಳು, ಹೊಸ ಅಂಗನವಾಡಿ ಶಾಲೆಗೆ ನೀರಿನ |

| | |
|---|---|
| | ವ್ಯವಸ್ಥೆ ಇತ್ಯಾದಿ ನಮೂದಿಸಿದರು. ಅದೇ ರೀತಿ ಇನ್ನೊಂದು ತಂಡ ನೈರ್ಮಲ್ಯ ತಂಡ ಸಾಮೂಹಿಕ ಶೌಚಾಲಯಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಶೌಚಾಲಯಗಳ ನಿರ್ಮಾಣ, ಸಾಮೂಹಿಕ ಶೌಚಾಲಯ ನಿರ್ಮಾಣಕ್ಕೆ ನಿವೇಶನ ಗುರುತಿಸುವಿಕೆ, ನಿರ್ಮಾಣ, ತಿಪ್ಪೇಗುಂಡಿಗಳ ಸ್ಥಳಾಂತರ ಇತ್ಯಾದಿಯನ್ನು ಗುರುತಿಸಿದರು.<br>ನಂತರ ಎರಡೂ ತಂಡಗಳು ಇನ್ನೊಂದು ಚಾರ್ಟನಲ್ಲಿ ನಕ್ಷೆಯಲ್ಲಿ ಬಿಡಿಸಿರುವಂತೆ ಮುಂದಿನ 5 ವರ್ಷಗಳಲ್ಲಿ ಅನುಷ್ಠಾನಗೊಳಿಸ ಬೇಕಾದ ಕಾರ್ಯಕ್ರಮಗಳನ್ನು ಆಧಾರವಾಗಿಟ್ಟುಕೊಂಡು ಆ ಕಾರ್ಯಕ್ರಮಕ್ಕೆ ಬೇಕಾಗಿರುವ ಅನುದಾನದ ಮೊತ್ತ, ಈ ಅನುದಾನವನ್ನು ಪಡೆಯಬಹುದಾದ ಮೂಲ ಹಾಗು ಆದ್ಯತೆ ಮೇರೆಗೆ ಯಾವ ವರ್ಷದಲ್ಲಿ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದು ಎಂಬುದನ್ನು ಕಾಲಂಗಳಲ್ಲಿ ಬರೆಯುವಂತೆ ತಿಳಿಸಲಾಯಿತು. ಸದಸ್ಯರೊಂದಿಗೆ ಪಂಚಾಯತಿ ಸಿಬ್ಬಂದಿ ಹಾಗು ಇಂಜಿನಿಯರ್ ಜೊತೆ ಸೇರಿ ಕಾರ್ಯಕ್ರಮ ರೂಪಿಸಲು ಸಹಕರಿಸಿದರು. ಎರಡೂ ಗುಂಪಿನವರು ವಿಷಯವನ್ನು ಮಂಡಿಸಿದ ನಂತರ ಸಂಪನ್ಮೂಲ ವ್ಯಕ್ತಿಗಳು ಈ ಚಟುವಟಿಕೆಯ ಮಹತ್ವವನ್ನು ವಿವರಿಸಿ ಕಾರ್ಯಕ್ರಮ ಮುಕ್ತಾಯಗೊಳಿಸಿದರು. |
| 05.00 – 06.00 | ಯಾದಗೀರ್ ತಾಲ್ಲೂಕಿಗೆ ಪ್ರಯಾಣ ಹಾಗು ಐ.ಬಿ.ಗೆ ಹಿಂತಿರುಗಲಾಯಿತು. ಚಟ್ನಳ್ಳಿ ಗ್ರಾಮ ಪಂಚಾಯತಿಗೆ ತೆರಳಿದ್ದ ತಂಡದವರು ಸಹ ಹಿಂತಿರುಗಿದರು |
| 08.30 – 11.00 | ರಾತ್ರಿಯ ಊಟದ ನಂತರ ಎರಡು ತಂಡದವರು ಒಟ್ಟಿಗೆ ಕುಳಿತು ಅವರ ಅನುಭವ ಹಂಚಿಕೊಂಡರು. ಸದರಿ ದಿನದ ಅನುಭವ ಹಂಚಿಕೆಯ ನಂತರ ಮರುದಿನಕ್ಕೆ ಇನ್ನೊಂದು ವಿನ್ಯಾಸವನ್ನು ರೂಪಿಸಲಾಯಿತು. ಇದರ ಸ್ಥೂಲ ವಿವರಣೆ ಈ ಕೆಳಕಂಡಂತಿದೆ.<br>▪ ಇಡೀ ಪ್ರಕ್ರಿಯೆಗೆ ಒಟ್ಟು 300 ನಿಮಿಷಗಳ ಬಳಕೆಯಾಗಿದೆ. ಇದರಲ್ಲಿ ವೈಯಕ್ತಿಕ ಸಮಸ್ಯೆಗಳ ಪಟ್ಟಿ, ಒಟ್ಟು ಸಮಸ್ಯೆಗಳ ಕ್ರೋಢೀಕರಣ, ಮೂರು ವಲಯಗಳಲ್ಲಿ ಸಮಸ್ಯೆಗಳ ವಿಂಗಡನೆ ಚಟುವಟಿಕೆಗೆ 180 ನಿಮಿಷಗಳ ಬಳಕೆಯಾಗಿದೆ. ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮದಲ್ಲಿ ಗುಂಪು ಚಟುವಟಿಕೆಗೆ ಕಡಿಮೆ ಸಮಯ ಲಭ್ಯವಿರುವುದನ್ನು ಗಣನೆಗೆ ತೆಗೆದುಕೊಂಡರೆ, ಕೇವಲ 60–75 ನಿಮಿಷಗಳ ಅವಧಿಯಲ್ಲಿ ಈ ಚಟುವಟಿಕೆಯನ್ನು ನಿರ್ವಹಿಸುವ ವಿಧಾನ ಅಳವಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಯಿತು.<br>▪ ಗ್ರಾಮದ ನಕ್ಷೆಯನ್ನು ಬಿಡಿಸುವ ಸಂಧರ್ಭದಲ್ಲಿ ಗ್ರಾಮದ ಎಲ್ಲಾ ಪ್ರಮುಖ ಸ್ಥಳಗಳ ಗುರುತುಗಳನ್ನು ಮಾಡುವುದರ ಬದಲಿಗೆ ಗ್ರಾಮದಲ್ಲಿ ಹಾದು ಹೋಗುವ ರಸ್ತೆ, ಪಂಚಾಯ್ತಿ ಕಟ್ಟಡ, ಇತ್ಯಾದಿ ಗುರುತಿಸಿ ನಂತರ ಪಂಚವಾರ್ಷಿಕ ಯೋಜನೆ ತಯಾರಿಸಲು ಆಯ್ದುಕೊಂಡ ಸಮಸ್ಯೆಯ ವಾಸ್ತವ ಸ್ಥಿತಿಯನ್ನು ಒಂದು ಬಣ್ಣದಲ್ಲಿ ಗುರುತಿಸುವಂತೆ ತಿಳಿಸುವುದು. ನಂತರ ಇನ್ನೊಂದು ಬಣ್ಣದಲ್ಲಿ ಮುಂದಿನ 5 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಉದ್ಧೇಶಿಸಿರುವ ಕಾರ್ಯಕ್ರಮಗಳನ್ನು ಗುರುತಿಸುವಂತೆ ಮಾಡಿದಾಗ ಸಮಸ್ಯೆ ಹಾಗು ಪರಿಹಾರ ಚೆನ್ನಾಗಿ ಮನದಟ್ಟಾಗುವುದು.<br>▪ ಪಂಚವಾರ್ಷಿಕ ಯೋಜನೆಯನ್ನು ತಯಾರಿಸುವಾಗ ವಿವರಣೆಯನ್ನು 4 ಕಾಲಂಗಳಲ್ಲಿ ಬರೆಯುವಂತೆ ತಿಳಿಸಬೇಕು.<br>▪ ಇಡೀ ಪ್ರಕ್ರಿಯೆಯನ್ನು ಅಂದರೆ, ಅಭಿವೃದ್ಧಿಯ ಕುರಿತು ಚರ್ಚಿಸುವುದರಿಂದ ಪಂಚವಾರ್ಷಿಕ ಯೋಜನೆ ತಯಾರಿಕೆಯನ್ನು ಕೇವಲ 3 ಗಂಟೆಗಳಲ್ಲಿ ಅಂದರೆ 180 ನಿಮಿಷಗಳಲ್ಲಿ ಮುಗಿಯುವಂತಿರಬೇಕು, ಇದಕ್ಕಾಗಿ ಪ್ರತಿ ಹಂತಕ್ಕೆ ಮೀಸಲಿಡಬೇಕಾದ ಅವಧಿಯನ್ನು ಸಹ ಗುರುತಿಸಲಾಯಿತು.<br>▪ ತಂಡಗಳನ್ನು ಪುನಃರಚಿಸಲಾಯಿತು. |

ಕ್ಷೇತ್ರ ಪ್ರಯೋಗ ನಡೆಸಿದ ಎರಡನೇ ದಿನದಲ್ಲಿ ಬೆಳಗಿನ ಉಪಹಾರ ನಂತರ ಪೂರ್ವ ಸಿದ್ಧತೆಗಳೊಂದಿಗೆ ಚಿತಾಪುರ ತಾಲ್ಲೂಕಿನ ಕೊಲ್ಲೂರು ಮತ್ತು ಇಂಗಳಗಿ ಗ್ರಾಮ ಪಂಚಾಯತಿಗಳಿಗೆ ಬೇಟಿ ನೀಡಲಾಯಿತು. ಸದರಿ ದಿನ ಕೈಗೊಂಡ ಕ್ಷೇತ್ರ ಅಧ್ಯಯನದ ವಿವರ ಈ ಕೆಳಕಂಡಂತಿದೆ.

| ದಿನ – 2 (19.10.05) | |
|---|---|
| 09.30 – 10.30 | ಕೊಲ್ಲೂರು ಗ್ರಾಮ ಪಂಚಾಯತಿಗೆ ಒಟ್ಟು 3 ಗ್ರಾಮಗಳು ಸೇರಿದ್ದು, 19 ಸದಸ್ಯರಿರುತ್ತಾರೆ. ಸದಸ್ಯರ ಪರಸ್ಪರ ಪರಿಚಯದ ನಂತರ ತಂಡದ ಭೇಟಿಯ ಉದ್ದೇಶದ ಕುರಿತು ಮನವರಿಕೆ ಮಾಡಿ ಕೊಡಲಾಯಿತು. ಚಟುವಟಿಕೆಯ ಪ್ರತಿ ಹಂತಕ್ಕೆ ಅವಧಿಯನ್ನು ಗೊತ್ತು ಪಡಿಸಿದ್ದು ಅದರಂತೆ ಈ ಕೆಳಕಂಡಂತೆ ಚಟುವಟಿಕೆ ನಡೆಸಲಾಯಿತು. |
| 10.30 – 11.00 | ಮೊದಲಿಗೆ ಸ್ಥಳೀಯ ಸರ್ಕಾರ ಗ್ರಾಮ ಸರ್ಕಾರದ ಮಹತ್ವ, ಅಭಿವೃದ್ಧಿ ಮುನ್ನೋಟ ತಯಾರಿಕೆ ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯತಿಯ ಪಾತ್ರ,, ಜನರ ಬೇಡಿಕೆಗಳಿಗೆ ಸ್ಪಂದಿಸುವಲ್ಲಿ ಸದಸ್ಯರ ಪಾತ್ರ, ಅಭಿವೃದ್ಧಿ ಎಂದರೇನು? ಅಭಿವೃದ್ಧಿಗೂ ಗ್ರಾಮ ಪಂಚಾಯತಿಗೂ ಇರುವ ಸಂಬಂಧದ ಕುರಿತು ಪ್ರಶ್ನೆಗಳನ್ನು ಕೇಳಿ ಚರ್ಚೆಯನ್ನು ನಡೆಸುವ ಮೂಲಕ ಮಾಹಿತಿಯನ್ನು ನೀಡಲಾಯಿತು. |
| 11.00 – 11.45 | ಸದಸ್ಯರನ್ನು ಎರಡು ತಂಡಗಳನ್ನಾಗಿ ವಿಂಗಡಿಸಲಾಯಿತು. ಈ ಎರಡೂ ತಂಡದವರು ವೃತ್ತಾಕಾರವಾಗಿ ಕುಳಿತ ನಂತರ ಪ್ರತಿ ಸದಸ್ಯರು ಗ್ರಾಮದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ದೊಡ್ಡ ಚಾರ್ಟಿನಲ್ಲಿ ಪಟ್ಟಿ ಮಾಡಲಾಯಿತು. ಇದೇ ಚಟುವಟಿಕೆಯನ್ನು ಇನ್ನೊಂದು ಬಾರಿ ಪುನರಾವರ್ತಿಸಲಾಯಿತು. ಹೀಗೆ ಮಾಡುವಾಗ ಉತ್ಪಾದನಾ, ಸಾಮಾಜಿಕ ವಲಯಗಳ ಸೇರಿದಂತೆ ಮೂಲಭೂತ ಸೌಕರ್ಯಗಳ ವಲಯಗಳ ಸಮಸ್ಯೆಗಳು ಸೇರಿರುವಂತೆ ನೋಡಿಕೊಳ್ಳಲಾಯಿತು. |
| 11.45 – 12.15 | ಉತ್ಪಾದನಾ, ಸಾಮಾಜಿಕ ನ್ಯಾಯ ಹಾಗು ಮೂಲಭೂತ ಸೌಕರ್ಯಗಳ ವಲಯದ ಆಧಾರದಲ್ಲಿ ರಚಿತವಾಗಿರುವ ಸ್ಥಾಯೀ ಸಮಿತಿಗಳು ಅದರ ಪಾತ್ರ ಇತ್ಯಾದಿ ವಿವರಿಸಿ, ನಂತರ ಕ್ರೋಢೀಕರಿಸಿದ ಸಮಸ್ಯೆಗಳನ್ನು ಮೇಲ್ಕಂಡ ಮೂರು ವಲಯಗಳಲ್ಲಿ ವಿಂಗಡಿಸಲಾಯಿತು. |
| 12.15 – 01.00 | ಸದಸ್ಯರನ್ನು ಎರಡೂ ತಂಡಗಳಾಗಿ ವಿಂಗಡಿಸಲಾಯಿತು. ಈ ಎರಡೂ ತಂಡದಲ್ಲಿ ಮೂರು ಗ್ರಾಮಗಳ ಸದಸ್ಯರು ಇರುವಂತೆ ಖಾತ್ರಿ ಪಡಿಸಿಕೊಳ್ಳಲಾಯಿತು. ಪಟ್ಟಿ ಮಾಡಿದ ಸಮಸ್ಯೆಗಳಲ್ಲಿ ಎರಡು ತಂಡಗಳಿಗೆ ಈಗಾಗಲೇ ಕ್ರೋಢೀಕರಿಸಿದ ಸಮಸ್ಯೆಗಳಲ್ಲಿ ಒಂದೊಂದು ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ತಿಳಿಸಲಾಯಿತು. ಒಂದು ತಂಡದವರು ನೀರಿನ ಸಮಸ್ಯೆಯನ್ನು ಆಯ್ಕೆ ಮಾಡಿದರೆ, ಇನ್ನೊಂದು ತಂಡದವರು ಶಿಕ್ಷಣ ಸಮಸ್ಯೆಯನ್ನು ಆಯ್ಕೆ ಮಾಡಿರುತ್ತಾರೆ.<br>ಈ ಎರಡೂ ತಂಡಗಳಿಗೆ ಗ್ರಾಮ ಪಂಚಾಯತಿ ನಕ್ಷೆ ಬಿಡಿಸುವಂತೆ ತಿಳಿಸಲಾಯಿತು. ಗ್ರಾಮಗಳಲ್ಲಿ ಹಾದು ಹೋದ ಪ್ರಮುಖ ರಸ್ತೆಗಳು, ಪಂಚಾಯತಿ ಕಟ್ಟಡ, ದೇವಸ್ಥಾನ ಇತ್ಯಾದಿ ಗುರುತಿಸುವಂತೆ ಸೂಚಿಸಲಾಯಿತು.<br>ನಂತರ ಒಂದು ಬಣ್ಣ ಬಳಸಿ ನೀರಿನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮೂರು ಗ್ರಾಮಗಳಲ್ಲಿ ವಾಸ್ತವದಲ್ಲಿ ಇರುವ ನೀರು ಸರಬರಾಜು ಕಾರ್ಯಕ್ರಮಗಳನ್ನು ಗುರುತಿಸುವಂತೆ ತಿಳಿಸಲಾಯಿತು. ಇದಾದ ನಂತರ ಉತ್ತಮ ನೀರು ಸರಬರಾಜು ಹಾಗು ನಿರ್ವಹಣೆಗೆ ಸಂಬಂಧಿಸಿದಂತೆ ಅವಶ್ಯವಾಗಿ ಬೇಕಾಗಿರುವ ಕಾರ್ಯಕ್ರಮಗಳನ್ನು ಇನ್ನೊಂದು ಬಣ್ಣ ಬಳಸಿ ಗುರುತು ಮಾಡುವಂತೆ ಸೂಚಿಸಲಾಯಿತು. ಅದೇ ರೀತಿ ಶಿಕ್ಷಣ ಹಾಗು ಶಿಕ್ಷಣ ಸಂಬಂಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸಹ ವಾಸ್ತವಲ್ಲಿ ಅಸ್ತಿತ್ವದಲ್ಲಿರುವ ಕಾರ್ಯಕ್ರಮಗಳು ಹಾಗು ಅವಶ್ಯವಾಗಿ ಬೇಕಾಗಿರುವ ಕಾರ್ಯಕ್ರಮಗಳನ್ನು ಬೇರೆ ಬೇರೆ ಬಣ್ಣಗಳಲ್ಲಿ ಗುರುತಿಸುವಂತೆ ತಿಳಿಸಲಾಯಿತು. |
| 01.00 – 01.30 | ಈ ನಕ್ಷೆಯನ್ನು ಆಧಾರವಾಗಿಟ್ಟುಕೊಂಡು ಪಂಚವಾರ್ಷಿಕ ಯೋಜನೆಯನ್ನು ರೂಪಿಸಲು ಸಂಪನ್ಮೂಲ ವ್ಯಕ್ತಿಗಳು ಮಾಹಿತಿಯನ್ನು ನೀಡಲಾಯಿತು.<br>ಮುಂದಿನ 5 ವರ್ಷಗಳಲ್ಲಿ ಮೇಲ್ಕಂಡ ಶಿಕ್ಷಣ ಹಾಗು ನೀರು ಪೂರೈಕೆ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅವಶ್ಯವಾಗಿ ಗುರುತಿಸಿರುವ ಕಾರ್ಯಕ್ರಮಗಳನ್ನು 4 ಕಾಲಂಗಳಲ್ಲಿ ಬರೆಯಲು ಸೂಚಿಸಲಾಯಿತು.<br>ಮೊದಲನೆ ಕಾಲಂನಲ್ಲಿ ಕಾರ್ಯಕ್ರಮದ ವಿವರ, ಎರಡನೇ ಕಾಲಂನಲ್ಲಿ ಅಂದಾಜು ವೆಚ್ಚ, ಮೂರನೇ ಕಾಲಂನಲ್ಲಿ ಅನುದಾನದ ಮೂಲ ಹಾಗು ನಾಲ್ಕನೇ ಕಾಲಂನಲ್ಲಿ ಆದ್ಯತೆಯ ಮೇರೆಗೆ ಯಾವ ವರ್ಷದಲ್ಲಿ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದಾರೋ ಆ ವರ್ಷವನ್ನು ಹಾಗು ಕಾರ್ಯಕ್ರಮವನ್ನು ಪೂರ್ಣಗೊಳಿಸಲು ತಗಲಬಹುದಾದ ಅವಧಿಯನ್ನು ಸಹ ಬರೆಯುವಂತೆ ತಿಳಿಸಲಾಯಿತು.<br>ನಕ್ಷೆ ಬಿಡಿಸುವಾಗ ಸದಸ್ಯರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದು ಕಂಡು ಬಂದಿತು. ಆದರೆ ಕಾರ್ಯಕ್ರಮಗಳ ಆದ್ಯತೆ ಗುರುತಿಸುವಾಗ ಮಾತ್ರ ಅವರಲ್ಲಿ ಗೊಂದಲ ಮೂಡಿದ್ದು, ಒಮ್ಮತಕ್ಕೆ ಬರಲು |

| | |
|---|---|
| | ಸಾಕಷ್ಟು ಸಮಯ ತೆಗೆದುಕೊಂಡು ಯೋಜನೆ ತಯಾರಿಕೆಯನ್ನು ಅಂತಿಮ ಗೊಳಿಸಿರುತ್ತಾರೆ.<br>ಈ ರೀತಿಯಲ್ಲಿ ಉಳಿದ ಸಮಸ್ಯೆಗಳಿಗೆ ಸಹ ಯೋಜನೆ ರೂಪಿಸುವ ಬಗ್ಗೆ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು. |
| 01.30 – 02.30 | ಊಟದ ವಿರಾಮ |
| 02.30 – 04.00 | ಊಟದ ನಂತರ ಸದಸ್ಯರು ಹಾಗು ಕಾರ್ಯದರ್ಶಿ ಹಾಗು ಸಿಬ್ಬಂದಿಯವರೊಂದಿಗೆ ಪಂಚಾಯತಿ ಎದುರಿಸುತ್ತಿರುವ ಸಮಸ್ಯೆಗಳು ಹಾಗು ಅದಕ್ಕೆ ಪರಿಹಾರ ಕಂಡುಕೊಳ್ಳುವ ರೀತಿಯ ಕುರಿತು ಚರ್ಚಿಸಲಾಯಿತು. |
| 04.00 – 05.00 | ಯಾದ್‌ಗೀರ್‌ಗೆ ಹಿಂತಿರುಗಲಾಯಿತು |
| 08.30 – 10.00 | ರಾತ್ರಿಯ ಊಟದ ನಂತರ ಆ ದಿನ ಸಂಪನ್ಮೂಲ ವ್ಯಕ್ತಿಗಳು ಪಡೆದ ಅನುಭವವನ್ನು ಹಂಚಿಕೊಂಡರು.<br>▪ ಚಟುವಟಿಕೆ ಪ್ರಾರಂಭಿಸುವ ಮುನ್ನ ಗ್ರಾಮ ಸರ್ಕಾರದ ಮಹತ್ವದ ಕುರಿತು ಸದಸ್ಯರೊಂದಿಗೆ ಇನ್ನೂ ಪರಿಣಾಮಕಾರಿಯಾಗಿ ಪ್ರಸಾಪಿಸುವುದು ಅಗತ್ಯವೆಂದು ಅಭಿಪ್ರಾಯ ಪಡಲಾಯಿತು. ಗ್ರಾಮ ಪಂಚಾಯತಿ ಸದಸ್ಯರ ಹೊಣೆಗಾರಿಕೆ, ಜನರ ನಿರೀಕ್ಷೆಗಳಿಗೆ ಸ್ಪಂದನೆ, ಸಮಸ್ಯೆಗಳಲ್ಲಿ ಆದ್ಯತೆ ಗುರುತಿಸುವುದು ಹೇಗೆ? ಅಭಿವೃದ್ಧಿ ಕುರಿತಾದ ಪರಿಕಲ್ಪನೆ ಇತ್ಯಾದಿಯನ್ನು ಸದಸ್ಯರೊಂದಿಗೆ ಚರ್ಚಿಸುವ ಮೂಲಕ ಚಟುವಟಿಕೆಯನ್ನು ಯಶಸ್ವಿಯಾಗಿ ನಡೆಸಲು ಪೂರ್ವಭಾವಿಯಾಗಿ ಸದಸ್ಯರನ್ನು ಸಜ್ಜುಗೊಳಿಸಲು ಕ್ರಮ ಕೈಗೊಳ್ಳಬೇಕು.<br>▪ ಪ್ರತಿ ಹಂತದಲ್ಲಿ ಬಳಸಿದ ವಿನ್ಯಾಸ ಹಾಗು ಮೀಸಲಿಟ್ಟ ಅವಧಿಯನ್ನು ಮರುದಿನದ ಪ್ರಯೋಗಕ್ಕೆ ಬಳಸಬಹುದೆಂದು ಅಭಿಪ್ರಾಯ ಪಡಲಾಯಿತು.<br>▪ ಸದಸ್ಯರಿಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಅವರೇ ಉತ್ತರಗಳನ್ನು ಕಂಡು ಕೊಳ್ಳುವ ರೀತಿಯಲ್ಲಿ ಮತ್ತಷ್ಟು ಪೂರಕ ಪ್ರಶ್ನೆಗಳನ್ನು ನಡೆಸಬೇಕೆಂದು ಅಭಿಪ್ರಾಯ ಪಡಲಾಯಿತು.<br>▪ ಗ್ರಾಮದ ಸಮಸ್ಯೆಗಳನ್ನು ಸದಸ್ಯರ ಅವರ ದೃಷ್ಟಿಕೋನದಿಂದ ನೋಡದೆ ಗ್ರಾಮದ ಒಬ್ಬ ಸಾಮಾನ್ಯ ವ್ಯಕ್ತಿಯ ದೃಷ್ಟಿಕೋನದಿಂದ ನೋಡುವ ಹಾಗು ಸಣ್ಣಪುಟ್ಟ ಸಮಸ್ಯೆಗಳನ್ನು ಪರಿಹರಿಸುವ ದೃಷ್ಠಿಯಿಂದ ಎಲ್ಲವನ್ನೂ ದಾಖಲಿಸುವ ವ್ಯವಸ್ಥೆ ಮಾಡುವುದು ಸೂಕ್ತವೆಂದು ತಿಳಿಸಲಾಯಿತು.<br>ಸಮಸ್ಯೆಗಳನ್ನು ಪಟ್ಟಿ ಮಾಡುವಾಗ ಪಂಚಾಯತಿಯ ಎಲ್ಲಾ ಗ್ರಾಮಗಳಿಗೂ ಹಾಗು ಎಲ್ಲಾ ಸದಸ್ಯರಿಗೆ ಆದ್ಯತೆ ಸಿಕ್ಕಿರುವುದರ ಕುರಿತು ಖಾತ್ರಿ ಪಡಿಸಿಕೊಳ್ಳಬೇಕು. |

ಹಿಂದಿನ ದಿನ ನಡೆಸಿದ ಚರ್ಚೆಯ ಆಧಾರದ ಮೇರೆಗೆ ತರಬೇತಿ ವಿನ್ಯಾಸಕ್ಕೆ ಅಂತಿಮ ರೂಪ ನೀಡಿ ದಿ॥ 20.10.05ರಂದು ಪ್ರಾಯೋಗಿಕ ಅನುಭವ ನಡೆಸಲು ಯಾದ್‌ಗೀರ್ ತಾಲ್ಲೂಕಿನ ಕಾಳಬೆಳಗುಂದಿ ಹಾಗು ಹಳಗೇರ ಗ್ರಾಮ ಪಂಚಾಯತಿಗಳಿಗೆ ಎರಡು ತಂಡಗಳಲ್ಲಿ ಭೇಟಿ ನೀಡಲಾಯಿತು.

ಹಿಂದಿನ ದಿನ ಚರ್ಚಿಸಿದ ಆಧಾರದಲ್ಲಿ ಸದಸ್ಯರೊಂದಿಗೆ ಅಭಿವೃದ್ಧಿ ಮುನ್ನೋಟ ತಯಾರಿಕೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪಂಚ ವಾರ್ಷಿಕ ಯೋಜನೆ ತಯಾರಿಸಲು ಕ್ರಮ ಕೈಗೊಳ್ಳಲಾಯಿತು. ಬೇಟಿ ನೀಡಿದ ಕಾಳಬೆಳಗುಂದಿ ಗ್ರಾಮ ಪಂಚಾಯತಿಯಲ್ಲಿ 19 ಸದಸ್ಯರ ಪೈಕಿ 16 ಸದಸ್ಯರು ಪಾಲ್ಗೊಂಡಿದ್ದು, ಎಲ್ಲರೂ ಚಟುವಟಿಕೆಯಲ್ಲಿ ಆಸಕ್ತಿಯಿಂದ ಪಾಲ್ಗೊಂಡಿರುತ್ತಾರೆ. ಸಮಸ್ಯೆಗಳನ್ನು ಗುರುತಿಸಿ, ಮೂರು ವಲಯಗಳಲ್ಲಿ ಕ್ರೋಢೀಕರಿಸಿದ ನಂತರ ನೀರಿನ ಕಾರ್ಯಕ್ರಮದ ಕುರಿತು ನಕ್ಷೆ ಬಿಡಿಸಿ ಅದರನ್ವಯ ಪಂಚವಾರ್ಷಿಕ ಯೋಜನೆ ತಯಾರಿಸಿರುತ್ತಾರೆ. ಪ್ರತಿ ಹಂತದ ಚಟುವಟಿಕೆಗೆ ಮೀಸಲಿಟ್ಟ ಅವಧಿಯಲ್ಲಿಯೇ ಆಯಾ ಚಟುವಟಿಕೆಯನ್ನು ಪೂರ್ಣಗೊಳಿಸಲು ಸಂಪನ್ಮೂಲ ವ್ಯಕ್ತಿಗಳು ಕ್ರಮ ಕೈಗೊಂಡಿರುತ್ತಾರೆ.

ಕ್ಷೇತ್ರ ಭೇಟಿ ಮುಗಿದ ನಂತರ ಮೂರು ದಿನಗಳ ಅಭಿವೃದ್ಧಿ ಮುನ್ನೋಟ ತಯಾರಿಕೆಯ ಪ್ರಾಯೋಗಿಕ ಅನುಭವದ ಆಧಾರದ ಮೇರೆಗೆ ತರಬೇತಿ ವಿನ್ಯಾಸ ರೂಪಿಸಲಾಯಿತು. ಪ್ರತಿ ಚಟುವಟಿಕೆಯ ಹಂತಕ್ಕೆ ಮೀಸಲಿಡಬೇಕಾದ ಅವಧಿ, ಅಳವಡಿಸಬೇಕಾದ ತರಬೇತಿ ವಿಧಾನ, ಇದಕ್ಕೆ ಪೂರಕವಾಗಿ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಒದಗಿಸಬೇಕಾದ ಓದುವ ಸಾಮಾಗ್ರಿ ಇತ್ಯಾದಿ ಕುರಿತು ಚರ್ಚೆಯ ಮುಖಾಂತರ ನಿರ್ಣಯವನ್ನು ಅಂತಿಮಗೊಳಿಸಲಾಯಿತು. ಕ್ಷೇತ್ರ ಪ್ರಯೋಗದ ಅನುಭವದಲ್ಲಿ ಸದಸ್ಯರಿಗೆ ಮನದಟ್ಟು ಮಾಡಬೇಕಾದ ವಿಷಯಗಳು, ತರಬೇತಿದಾರರಿಗೆ ಮನವರಿಕೆಯಾಗಬೇಕಾದ ಅಂಶಗಳ ಸಾರಾಂಶವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

## 8) ಅಭಿವೃದ್ಧಿ ಮುನ್ನೋಟ ತಯಾರಿಕೆಯಲ್ಲಿ ಅಳವಡಿಸಬೇಕಾದ ಚಟುವಟಿಕೆಗಳು, ಚರ್ಚೆಗೆ ಪೂರಕವಾದ ಅಂಶಗಳು, ನಿಗದಿಪಡಿಸಿದ ಅವಧಿ ಇತ್ಯಾದಿ ಕುರಿತಾದ ವಿವರಣೆ :

### (ಅ) ಅಭಿವೃದ್ಧಿ ಮುನ್ನೋಟ ತಯಾರಿಕೆಯ ಅವಶ್ಯಕತೆಯನ್ನು ಮನವರಿಕೆ ಮಾಡುವುದು (30 ನಿಮಿಷ) :–

- ಸಂಪನ್ಮೂಲ ವ್ಯಕ್ತಿಗಳು ಗ್ರಾಮ ಪಂಚಾಯತಿ ಸದಸ್ಯರಿಗೆ ಮನದಟ್ಟು ಮಾಡಿಸಬೇಕಾದ ಅಂಶಗಳು
  - ⇒ ಪ್ರಜಾಪ್ರಭುತ್ವದಲ್ಲಿರುವ ಐದು ಸರ್ಕಾರಗಳಲ್ಲಿ ಗ್ರಾಮ ಸರ್ಕಾರವು ಕೂಡ ಒಂದು ಸರ್ಕಾರವಾಗಿದ್ದು, ಇದರ ಮಹತ್ವವನ್ನು ಮನದಟ್ಟು ಮಾಡಿಕೊಡುವುದು.
  - ⇒ ಜನತೆಗೆ ಹತ್ತಿರದಲ್ಲಿರುವ ಗ್ರಾಮ ಸರ್ಕಾರದಿಂದ ಜನ ಬಹಳಷ್ಟು ನಿರೀಕ್ಷಿಸುವುದರಿಂದ (ಉದಾ: ಬೀದಿದೀಪ, ಕುಡಿಯುವ ನೀರು, ಚರಂಡಿ ವ್ಯವಸ್ಥೆ, ಅಂಗನವಾಡಿ ಶಾಲೆ ರಿಪೇರಿ ಇತ್ಯಾದಿ) ಗ್ರಾಮ ಪಂಚಾಯತಿಯ ಜವಾಬ್ದಾರಿಯನ್ನು ಮನವರಿಕೆಯನ್ನು ಮಾಡಿಕೊಡುವುದು.
  - ⇒ ಚುನಾವಣೆಗೆ ನಿಂತು 5 ವರ್ಷಗಳ ಅವಧಿಗೆ ಪಂಚಾಯತಿ ಸದಸ್ಯನಾಗಿ ಆಯ್ಕೆಯಾದ ಮೇಲೆ ಹೊರಬೇಕಾದ ಹೊಣೆಗಾರಿಕೆಯನ್ನು ಮನದಟ್ಟು ಮಾಡಿಕೊಡುವುದು. ಅಂದರೆ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು, ಸ್ಥಳೀಯ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡುವುದು, ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನ, ಜನರ ಸಹಭಾಗಿತ್ವದೊಂದಿಗೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಇತ್ಯಾದಿ ಕುರಿತು ಚರ್ಚೆ.
  - ⇒ ಅಭಿವೃದ್ಧಿಗೆ ಹಾಗು ಗ್ರಾಮ ಪಂಚಾಯತಿಗೆ ಇರುವ ಪರಸ್ಪರ ಸಂಬಂಧದ ವಿಶ್ಲೇಷಣೆ. ಹಾಗು ಉತ್ಪಾದನಾ. ಮೂಲಭೂತ ಸೌಕರ್ಯ ಹಾಗು ಸಾಮಾಜಿಕ ನ್ಯಾಯ ವಲಯಗಳಲ್ಲಿರುವ ಸಮಸ್ಯೆಗಳನ್ನು ಪರಿಹರಿಸಬೇಕಾದರೆ, ಅಭಿವೃದ್ಧಿ ಮುನ್ನೋಟ ತಯಾರಿಕೆ ಯೋಜನೆಯನ್ನು ಸಿದ್ಧಪಡಿಸುವುದು ಅವಶ್ಯ ಎಂಬ ವಿಷಯವನ್ನು ಸದಸ್ಯರಿಗೆ ಮನದಟ್ಟು ಮಾಡಿಕೊಡುವುದು.

### (ಆ) ಸ್ಥಳೀಯ ಸಮಸ್ಯೆಗಳನ್ನು ಹಾಗು ಬೇಡಿಕೆಗಳನ್ನು ಪಟ್ಟಿ ಮಾಡುವುದು ಹಾಗು ಈ ಸಮಸ್ಯೆಗಳನ್ನು ವಲಯವಾರು ವಿಂಗಡಿಸುವುದು (45 ನಿಮಿಷಗಳು) :–

ಗ್ರಾಮ ಪಂಚಾಯತಿ ಸದಸ್ಯರನ್ನು ವಾರ್ಡ್‌ಗಳ ಆಧಾರದಲ್ಲಾಗಲೀ/ ಗ್ರಾಮವಾರು ಗುಂಪುಗಳಲ್ಲಾಗಲೀ ವಿಂಗಡಿಸಿ, ಒಂದೊಂದು ಗುಂಪಿಗೆ ಒಬ್ಬೊಬ್ಬ ಸಂಪನ್ಮೂಲ ವ್ಯಕ್ತಿ ಜೊತೆ ಸೇರಿಕೊಂಡು ಅವರ ವಾರ್ಡ್‌ಗಳ/ ಗ್ರಾಮಗಳ ಸಮಸ್ಯೆಗಳನ್ನು ಮತ್ತು ಬೇಡಿಕೆಗಳನ್ನು ಪಟ್ಟಿ ಮಾಡಿಸಲು ನೆರವು ಮಾಡಬೇಕು. ಈ ರೀತಿ ಪಟ್ಟಿ ಮಾಡುವಾಗ ಸದಸ್ಯರು ತಾವು ಚುನಾಯಿತ ಪ್ರತಿನಿಧಿಗಳು ಎಂಬುದನ್ನು ಬದಿಗಿಟ್ಟು, ಊರಿನ ಜನ ಸಾಮಾನ್ಯನ ನೆಲೆಯಲ್ಲಿ ನಿಂತು ಸಮಸ್ಯೆಗಳನ್ನು ಗುರುತಿಸಲು ಶಕ್ತನಾಗುವಲ್ಲಿ ಸಂಪನ್ಮೂಲ ವ್ಯಕ್ತಿಗಳು ನೆರವಾಗಬೇಕು. ಸಮಸ್ಯೆಗಳನ್ನು ಕೇವಲ ಮೂಲಭೂತ ಸೌಕರ್ಯ ವಲಯಕ್ಕೆ ಸೀಮಿತಗೊಳಿಸದೇ ಸಾಮಾಜಿಕ ನ್ಯಾಯ ಹಾಗು ಉತ್ಪಾದನಾ ಕ್ಷೇತ್ರದ ಸಮಸ್ಯೆಗಳತ್ತ ಸದಸ್ಯರ ಗಮನ ಸೆಳೆದು ಆ ಕ್ಷೇತ್ರದ ಸಮಸ್ಯೆಗಳನ್ನು ಸಹ ಪಟ್ಟಿ ಮಾಡಿಸುವುದು.

ಪಟ್ಟಿ ಮಾಡಿದ ಎಲ್ಲಾ ಸಮಸ್ಯೆಗಳನ್ನು ವಲಯವಾರು ವಿಂಗಡಿಸಬೇಕು. ಇದಕ್ಕೆ ಮುನ್ನ ಸದಸ್ಯರಿಗೆ ವರ್ಗೀಕರಣ ಮಾಡುತ್ತಿರುವ ಉತ್ಪಾದನಾ, ಮೂಲಭೂತ ಸೌಕರ್ಯ ಹಾಗು ಸಾಮಾಜಿಕ ನ್ಯಾಯ ವಲಯಗಳಿಗೂ ಗ್ರಾಮ ಪಂಚಾಯತಿಯಲ್ಲಿ ರಚಿತವಾಗಿರುವ ಸ್ಥಾಯೀ ಸಮಿತಿಗಳಿಗೂ ಪರಸ್ಪರ ಸಂಬಂಧವಿರುವುದನ್ನು ಗಮನಕ್ಕೆ ತರುವುದು. ಪ್ರಸ್ತುತ ಗ್ರಾಮ ಪಂಚಾಯತಿಗಳಲ್ಲಿ ಸ್ಥಾಯೀ ಸಮಿತಿಗಳು ನಿಷ್ಕ್ರಿಯಸ್ಥಿತಿಯಲ್ಲಿರುವುದರಿಂದ ಅದನ್ನು ಸಕ್ರಿಯಗೊಳಿಸಲು ಆಯಾ ವಲಯಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಸ್ಥಾಯೀ ಸಮಿತಿಗಳ ಮೂಲಕ ಪರಿಹರಿಸುವ ಕ್ರಮದ ಬಗ್ಗೆ ಮನದಟ್ಟು ಮಾಡುವುದು ಅವಶ್ಯ. ಹೀಗಾಗಿ ಸದಸ್ಯರಿಗೆ ವಿವಿಧ ವಲಯಗಳ ಕುರಿತು ಮುಂಚೆಯೇ ಮನವರಿಕೆ ಮಾಡಿಕೊಟ್ಟು, ಅವರಿಂದಲೇ ಈ ಸಮಸ್ಯೆಗಳ ವರ್ಗೀಕರಣ ಆಗುವಂತೆ ನೋಡಿಕೊಳ್ಳಬೇಕು. ಸಮಸ್ಯೆಗಳ ವರ್ಗೀಕರಣದ ಉದಾಹರಣೆಯನ್ನು ಈ ಕೆಳಕಂಡಂತೆ ತೋರಿಸಲಾಗಿದೆ.

| ಉತ್ಪಾದನಾ ಕ್ಷೇತ್ರ | ಮೂಲಭೂತ ಸೌಕರ್ಯ ಕ್ಷೇತ್ರ | ಸಾಮಾಜಿಕ ನ್ಯಾಯ ಕ್ಷೇತ್ರ |
|---|---|---|
| ▪ ಹೈನುಗಾರಿಕೆಗೆ ಸಾಲ ಸೌಲಭ್ಯ<br>▪ ಉತ್ತಮ ಬಿತ್ತನೆ ಬೀಜಗಳ ಪೂರೈಕೆ<br>▪ ಪಶು ವೈದ್ಯಕೀಯ ಆಸ್ಪತ್ರೆ<br>▪ ಬೆಳೆ ರೋಗಗಳ ನಿಯಂತ್ರಣ<br>▪ ಏತ ನೀರಾವರಿ ಯೋಜನೆ<br>▪ ಮಣ್ಣು ಪರೀಕ್ಷೆ<br>▪ ಜಲ ಸಂವರ್ಧನೆ ಕಾರ್ಯಕ್ರಮಗಳು<br>▪ ಸಾವಯವ ಗೊಬ್ಬರ ತಯಾರಿಕೆ<br>▪ ಕೃಷಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆ<br>▪ ರೇಷ್ಮೆ ಕೃಷಿಗೆ ಪ್ರೋತ್ಸಾಹ<br>▪ ಪುಷ್ಪೋದ್ಯಮಕ್ಕೆ ಪ್ರೋತ್ಸಾಹ<br>▪ ಜೈವಿಕ ತಂತ್ರಜ್ಞಾನ ಅಳವಡಿಕೆ ಕಾರ್ಯಕ್ರಮಗಳು<br>▪ ಸಹಕಾರ ಸಂಘಗಳ ಪುನಶ್ಚೇತನ<br>▪ ತೋಟಗಾರಿಕೆ ಬೆಳೆಗಳನ್ನು ವೃದ್ದಿಸುವ ಕಾರ್ಯಕ್ರಮಗಳು | ▪ ಸಿ.ಸಿ.ರಸ್ತೆ ನಿರ್ಮಾಣ<br>▪ ಅಂಗನವಾಡಿ ಕೇಂದ್ರ ದುರಸ್ತಿ<br>▪ ಶೌಚಾಲಯ ನಿರ್ಮಾಣ<br>▪ ತಿಪ್ಪೇಗುಂಡಿ ಸ್ಥಳಾಂತರ<br>▪ ಶಾಲೆಯಲ್ಲಿ ನೀರಿನ ಟ್ಯಾಂಕ್ ನಿರ್ಮಾಣ<br>▪ ಚರಂಡಿ ನಿರ್ಮಾಣ<br>▪ ವಿದ್ಯುತ್ ಕಂಬ ಅಳವಡಿಸುವುದು<br>▪ ಶಾಲೆಗೆ ಪಿಠೋಪಕರಣಗಳನ್ನು ಒದಗಿಸುವುದು<br>▪ ರಸ್ತೆ ರಿಪೇರಿ<br>▪ ಬೀದಿದೀಪ ರಿಪೇರಿ<br>▪ ರಸ್ತೆಗೆ ಡಾಂಬರು ಹಾಕಿಸುವುದು<br>▪ ಶಾಲಾ ಕಾಂಪೌಡ್ ನಿರ್ಮಾಣ<br>▪ ಕಡುಬಡವರಿಗೆ ವಸತಿ ನಿರ್ಮಾಣ<br>▪ ಕೆರೆ ಹೂಳು ತೆಗೆಸುವುದು<br>▪ ಮಳೆ ನೀರಿನ ಕೊಯ್ಲು<br>▪ ಅಂತರ್ಜಲ ಮಟ್ಟ ಹೆಚ್ಚಿಸುವುದು<br>▪ ಕಸದ ತೊಟ್ಟಿ ನಿರ್ಮಾಣ<br>▪ ವಸತಿ ನಿರ್ಮಾಣ | ▪ ಸಾರಾಯಿ ಅಂಗಡಿ ತೆರವು<br>▪ ಪರಿಶಿಷ್ಟ ಕುಟುಂಬಗಳಿಗೆ ಪಡಿತರ ಚೀಟಿ<br>▪ ಕುಡಿಯುವ ನೀರಿನ ಪೂರೈಕೆ ಕಾರ್ಯಕ್ರಮಗಳು<br>▪ ಅಂಗವಿಕಲರಿಗೆ, ವಿಧವೆಯರಿಗೆ, ವೃದ್ಧರಿಗೆ ಮಾಶಾಸನದ ವ್ಯವಸ್ಥೆ<br>▪ ಕೋಮು ಸೌಹಾರ್ದ ಭಾವನೆ ಮೂಡಿಸುವಂತಹ ಕಾರ್ಯಕ್ರಮಗಳು<br>▪ ವಸತಿಹೀನರಿಗೆ ನಿವೇಶನ, ವಸತಿ ಕೊಡುವ ಸೌಲಭ್ಯ<br>▪ ಅಸಮಾನತೆ ನಿವಾರಣೆಗಾಗಿ ಕಾರ್ಯಕ್ರಮಗಳು<br>▪ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲೀಕರಿಸುವ ಕಾರ್ಯಕ್ರಮಗಳು<br>▪ ಅರ್ಹ ಮಕ್ಕಳು ಅಂಗನವಾಡಿ ಸೌಲಭ್ಯ ಪಡೆಯಲು ಪೂರಕ ವ್ಯವಸ್ಥೆ<br>▪ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನ ಕಾರ್ಯಕ್ರಮಗಳು<br>▪ ಜೀತ ಪದ್ಧತಿ ನಿರ್ಮೂಲನ ಕಾರ್ಯಕ್ರಮಗಳು |

## (ಇ) ಸಂಪನ್ಮೂಲ ನಕ್ಷೆ ಸಿದ್ಧಪಡಿಸುವುದು (30 ನಿಮಿಷ) :–

ನಕ್ಷೆ ಬಿಡಿಸುವಲ್ಲಿ ಗ್ರಾಮ ಪಂಚಾಯತಿಯ ಎಲ್ಲಾ ಗ್ರಾಮಗಳನ್ನು ಪ್ರತಿನಿಧಿಸುವ ಸದಸ್ಯರಿರುವಂತೆ ನೋಡಿಕೊಳ್ಳಬೇಕು. ಸದಸ್ಯರು ವಿಂಗಡನೆ ಮಾಡಿದ ವಲಯವಾರು ಸಮಸ್ಯೆಗಳ ಪಟ್ಟಿಯಿಂದ ಯಾವುದಾದರೊಂದು ಒಂದು ಕ್ಷೇತ್ರವನ್ನು ಅವರೇ ಆಯ್ಕೆ ಮಾಡುವಂತೆ ಹೇಳಬೇಕು. ಸದಸ್ಯರು ಬಿಡಿಸಬೇಕಾದ ಸಂಪನ್ಮೂಲ ನಕ್ಷೆಯ ಮಾದರಿ ಈ ಕೆಳಕಂಡಂತಿದೆ.

**ನಕ್ಷೆ ಬಿಡಿಸುವಾಗ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದು ಕೊಳ್ಳಬೇಕು.**

(1) ಗ್ರಾಮ ಪಂಚಾಯತಿಯ ಭೌಗೋಳಿಕ ಗಡಿಗುರುತನ್ನು ದೊಡ್ಡ ಹಾಳೆಯಲ್ಲಿ ಬಿಡಿಸುವುದು.
(2) ಪಂಚಾಯತ್ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳನ್ನು ಗಡಿಗುರುತಿನೊಳಗೆ ಬಿಡಿಸುವುದು
(3) ಪಂಚಾಯತಿ ಕೇಂದ್ರ ಸ್ಥಾನ, ಮುಖ್ಯ ರಸ್ತೆಗಳು ಇತ್ಯಾದಿ ಗುರುತಿಸುವುದು
(4) ಆಯ್ಕೆ ಮಾಡಿಕೊಂಡ ಕಾರ್ಯಕ್ರಮದ ಕುರಿತಂತೆ ಪ್ರಸಕ್ತ ಇರುವ ಎಲ್ಲಾ ಸೌಲಭ್ಯಗಳನ್ನು ಒಂದು ಬಣ್ಣದಲ್ಲಿ ಗುರುತಿಸುವುದು.
(5) ಅದೇ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೊರತೆಯನ್ನು ತುಂಬಿಸಲು ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮಗಳನ್ನು ಇನ್ನೊಂದು ಬಣ್ಣದಲ್ಲಿ ಗುರುತಿಸುವುದು
(6) ಎಲ್ಲಾ ಸದಸ್ಯರು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು

**(ಈ) ಪಂಚವಾರ್ಷಿಕ ಯೋಜನೆ ಸಿದ್ಧಪಡಿಸುವುದು (30 ನಿಮಿಷ) :–**

ಸಿದ್ಧಪಡಿಸಲಾದ ನಕ್ಷೆಯನ್ನು ಮುಂದಿಟ್ಟುಕೊಂಡು ಬೇಡಿಕೆಗಳನ್ನು ಅವಶ್ಯಕತೆಗಳನ್ನು ಆದ್ಯತೆಗೆ ಅನುಗುಣವಾಗಿ ಪಟ್ಟಿ ಮಾಡಿಕೊಂಡು, ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ ಪ್ರಕ್ರಿಯೆ ಆರಂಭಿಸಬೇಕು. ಇದರಲ್ಲಿ 4 ಕಾಲಂಗಳನ್ನು ಅಳವಡಿಸಬೇಕು. ಮೊದಲನೆ ಕಾಲಂನಲ್ಲಿ ಕಾಮಗಾರಿ ಹೆಸರು, ಎರಡನೆ ಕಾಲಂನಲ್ಲಿ ಅದಕ್ಕೆ ತಗಲುವ ಅಂದಾಜು ವೆಚ್ಚ, ಮೂರನೆ ಕಾಲಂನಲ್ಲಿ ಅನುದಾನದ ಮೂಲ ಹಾಗು ನಾಲ್ಕನೇ ಕಾಲಂನಲ್ಲಿ ಕಾಲಮಿತಿಯನ್ನು ಬರೆಯಬೇಕು. ಅಂದರೆ ಯಾವ ಕಾಮಗಾರಿಯನ್ನು ಯಾವ ವರ್ಷದಲ್ಲಿ ಅನುಷ್ಠಾನಗೊಳಿಸಬಹುದು ಎನ್ನುವ ವಿಷಯವನ್ನು ಸ್ಪಷ್ಟಪಡಿಸಬೇಕು.

| ಕ್ರ.ಸಂ. | ಕಾಮಗಾರಿ | ಅಂದಾಜು ವೆಚ್ಚ | ಅನುದಾನದ ಮೂಲ | ಕಾಲಮಿತಿ |
|---|---|---|---|---|
| 1 | ಒಂದು ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆ | 70,000/– | ತಾಲ್ಲೂಕು /ಗ್ರಾಮ ಪಂಚಾಯತ್ | 2ನೇ ವರ್ಷದಿಂದ 3ನೇ ವರ್ಷ |
| 2 | ಒಂದು ಶಾಲೆಗೆ ಆಟದ ಮೈದಾನ ವ್ಯವಸ್ಥೆ | 10,000/– | ಗ್ರಾಮ ಪಂಚಾಯತ್ | ಮೊದಲನೇ ವರ್ಷ |
| 3 | ಒಂದು ಶಾಲಾ ಕಾಂಪೌಂಡ್ ನಿರ್ಮಾಣ | 1,00,000/– | ಜಿಲ್ಲಾ ಪಂಚಾಯತ್ | ಮೂರನೇ ವರ್ಷ |
| 4 | ಮೂರು ಶಾಲೆಗಳಿಗೆ ಶೌಚಾಲಯ ನಿರ್ಮಾಣ | 40,000/– | ಸಂಪೂರ್ಣ ನೈರ್ಮಲ್ಯ ಕಾರ್ಯಕ್ರಮ | 1ನೇ ವರ್ಷದಿಂದ 2ನೇ ವರ್ಷದಲ್ಲಿ |
| 5 | 2 ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳು | 4,00,000/– | ಎಂ.ಎಲ್.ಎ. ಅನುದಾನ | 2ನೇ ವರ್ಷ ಹಾಗು 4ನೇ ವರ್ಷ |
| 6 | 2 ಅಂಗನವಾಡಿಗೆ ಶೌಚಾಲಯ | 10,000/– | ಸಂಪೂರ್ಣ ನೈರ್ಮಲ್ಯ ಕಾರ್ಯಕ್ರಮ | ಮೊದಲನೇ ವರ್ಷ |
| 7 | 2 ಗ್ರಾಮಗಳಲ್ಲಿ ಅಂಗನವಾಡಿ ನಿರ್ಮಾಣ | 2,00,000/– | ಇಲಾಖೆ ಅನುದಾನ / ಎಂ.ಪಿ.ಅನದಾನ | 2ನೇ ವರ್ಷ ಹಾಗು 4ನೇ ವರ್ಷ |
| 8 | ಹೈಸ್ಕೂಲ್‌ಗೆ ನಿವೇಶನದ ವ್ಯವಸ್ಥೆ | 1,00,000/– | ಸರ್ಕಾರದ ನೆರವು | 3ನೇ ವರ್ಷ |
| 9 | 4 ಅಂಗನವಾಡಿಗೆ ಪಿಠೋಪಕರಣ ಹಾಗು ಪಾಕೋಪಕರಣಗಳ ವ್ಯವಸ್ಥೆ | 12,000/– (ಪ್ರತಿ ಅಂ.ಗೆ ರೂ.3,000) | ದಾನಿಗಳಿಂದ ಹಾಗು ಗ್ರಾಮ ಪಂಚಾಯತಿ | ಮೊದಲ ಎರಡು ವರ್ಷಗಳಲ್ಲಿ |
| 10 | ಗ್ರಂಥಾಲಯಕ್ಕಾಗಿ ಕೊಠಡಿ ನಿರ್ಮಾಣ | 30,000/– | ಗ್ರಾಮ ಪಂಚಾಯತಿ | ಮೂರನೇ ವರ್ಷ |
| 11 | ಲೈಬ್ರರಿಗಾಗಿ ಓದುವ ಸಾಮಾಗ್ರಿಗಳ ಪೂರೈಕೆ | 15,000/– | ದಾನಿಗಳಿಂದ ಹಾಗು ಇತರ ಮೂಲಗಳಿಂದ ಸಂಗ್ರಹಣೆ | ಮೂರನೇ ವರ್ಷ |
| 12 | 1 ಶಾಲೆಗೆ ಅಡಿಗೆ ಕೋಣೆ ನಿರ್ಮಾಣ | 40,000/– | ಗ್ರಾಮ ಪಂಚಾಯತಿ | ಮೊದಲನೇ ವರ್ಷ |

**5) ಕ್ಷೇತ್ರ ಪ್ರಯೋಗದ ನಂತರ ಅಭಿವೃದ್ಧಿ ಮುನ್ನೋಟ ತಯಾರಿಕೆಗೆ ಸಂಬಂಧಿಸಿದಂತೆ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮದ ಪುನರ್ರಚನೆ :**

ಕ್ಷೇತ್ರ ಪ್ರಯೋಗದ ನಂತರ ಗ್ರಾಮ ಪಂಚಾಯತಿಯ ಎಲ್ಲಾ ಸದಸ್ಯರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಹಾಗು ಸಂಪನ್ಮೂಲ ವ್ಯಕ್ತಿಗಳು ಸದಸ್ಯರಿಗೆ ಸುಲಭವಾಗಿ ಮನದಟ್ಟು ಮಾಡಬಹುದಾದ ತರಬೇತಿ ವಿನ್ಯಾಸವನ್ನು ಪುನರ್ರಚಿಸಲು ಕ್ರಮ ಕೈಗೊಳ್ಳಲಾಯಿತು. ಒಟ್ಟು 26 ಪ್ರಸರಣಗಳಲ್ಲಿ 7 ಪ್ರಸರಣಗಳು ಮುಗಿದಿದ್ದು, 8ನೇ ಪ್ರಸರಣದಿಂದ ಅಂದರೆ, ದಿ॥ 09.11.05ರಿಂದ

ಹೊಸ ತರಬೇತಿ ವಿನ್ಯಾಸ ರೂಪಿಸಲಾಯಿತು. ಈ ಹಿಂದೆ ರಚಿಸಲಾಗಿದ್ದ ತರಬೇತಿ ವಿನ್ಯಾಸಕ್ಕೆ ಹೊಸ ರೂಪ ನೀಡಿ ಈ ಕೆಳಕಂಡಂತೆ ರೂಪಿಸಲಾಯಿತು.

| ಸಮಯ | ವಿಷಯ | ವಿವರ |
|---|---|---|
| 09.30–10.00 | **ಹಿಂದಿನ ದಿನದ ಕಲಿಕೆಯ ಪುನರ್ಮನನ** | ಸ್ಥಳೀಯ ಚಟುವಟಿಕೆ |
| 10.00–10.30 | **ಗ್ರಾಮ ಪಂಚಾಯತಿಯ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿ ಮತ್ತು ಅನುಷ್ಠಾನ**<br>ಗ್ರಾ. ಪಂ.ಯ ಅಭಿವೃದ್ಧಿ ಮುನ್ನೋಟದ ಕುರಿತು ಮಾಹಿತಿ | ಶ್ರೀ. ಹಿರೇಮಠ್, ನಿರ್ದೇಶಕರು, (ಮೂ.ಸೌ) ಗ್ರಾ.ಅ.ಪಂ.ರಾ.ಇಲಾಖೆ) ಇವರಿಂದ ವಿಷಯ ಮಂಡನೆ – ಉಪಗ್ರಹ ಪ್ರಸರಣ |
| 10.30–11.00 | **ಅಭಿವೃದ್ಧಿ ಮುನ್ನೋಟ (ಪಂಚ ವಾರ್ಷಿಕ ಯೋಜನೆ) ಸಿದ್ಧಪಡಿಸಬೇಕಾದ ಅವಶ್ಯಕತೆಯ ಕುರಿತು ಮನವರಿಕೆ ಮಾಡುವುದು** | **ಸ್ಥಳೀಯ ಚಟುವಟಿಕೆ : ಚರ್ಚಿಸುವ ವಿಷಯಗಳು**<br>1. ಗ್ರಾ. ಪಂಚಾಯತಿಯೆನ್ನುವುದು ಸ್ಥಳೀಯ ಸರ್ಕಾರ<br>2. ಸ್ಥಳೀಯ ಸರ್ಕಾರದ ಬಗ್ಗೆ ಜನರ ನಿರೀಕ್ಷೆಗಳು<br>3. ಸ್ಥಳೀಯ ಸರ್ಕಾರದ ಪ್ರತಿನಿಧಿಗಳಾಗಿ ಪಂಚಾಯತಿ ಸದಸ್ಯರ ಹೊಣೆಗಾರಿಕೆ<br>4. ಅಭಿವೃದ್ಧಿ ಎಂದರೇನು?<br>⇒ ಸಾಮಾಜಿಕ ನ್ಯಾಯ<br>⇒ ಮೂಲಭೂತ ಸೌಕರ್ಯಗಳು<br>⇒ ಉತ್ಪಾದನೆ |
| 11.00–11.15 | **ಟೀ ವಿರಾಮ** | |
| 11.15–12.00 | **ಸ್ಥಳೀಯ ಅವಶ್ಯಕತೆಗಳು ಹಾಗು ಬೇಡಿಕೆಗಳನ್ನು ಪಟ್ಟಿ ಮಾಡುವುದು** | **ಸ್ಥಳೀಯ ಚಟುವಟಿಕೆ –**<br>▪ ಒಟ್ಟು ಸದಸ್ಯರನ್ನು ಪಂಚಾಯತಿವಾರು ಗುಂಪುಗಳಾಗಿ ವಿಂಗಡಿಸಬೇಕು.<br>▪ ಸಂ.ವ್ಯಕ್ತಿಗಳು ಪ್ರತಿ ಗುಂಪಿನಲ್ಲಿ ಸಕ್ರಿಯವಾಗಿ ಭಾಗವಹಿಸಿ ಆ ಪಂಚಾಯತಿಯ ಎಲ್ಲಾ ವಾರ್ಡುಗಳ ಅವಶ್ಯಕತೆಗಳು/ ಬೇಡಿಕೆಗಳನ್ನು ಪಟ್ಟಿ ಮಾಡಿಸಬೇಕು<br>▪ ಒಂದೇ ಪಂಚಾಯತಿಯ ಸದಸ್ಯರಿದ್ದಲ್ಲಿ ವಾರ್ಡ್‌ಗಳ ಆಧಾರದಲ್ಲಿ ಗರಿಷ್ಠ 3 ಸಣ್ಣಗುಂಪುಗಳನ್ನು ಮಾಡಬಹುದು<br>▪ ಸಮಸ್ಯೆಗಳನ್ನು ಗುರುತಿಸುವಾಗ ತಾವು ಚುನಾಯಿತ ಪ್ರತಿನಿಧಿಗಳು ಎನ್ನುವ ಅಂಶವನ್ನು ಬದಿಗಿಟ್ಟು ಸಾರ್ವಜನಿಕ ವ್ಯಕ್ತಿಗಳು ಎನ್ನುವ ನೆಲೆಯಲ್ಲಿ ತಮ್ಮ ಊರಿನ ಸಮಸ್ಯೆಗಳು, ಮೂಲಭೂತ ಅವಶ್ಯಕತೆಗಳು ಹಾಗು ಬೇಡಿಕೆಗಳನ್ನು ಗುರುತಿಸುವಂತೆ ಸಂಪನ್ಮೂಲ ವ್ಯಕ್ತಿಗಳು ಪ್ರೇರೇಪಿಸಬೇಕು<br>▪ ಸಮಸ್ಯೆಗಳನ್ನು ಗುರುತಿಸುವಾಗ ಸಾಮಾಜಿಕ ನ್ಯಾಯ, ಮೂಲಭೂತ ಸೌಕರ್ಯ ಹಾಗು ಉತ್ಪಾದನಾ ವಲಯಕ್ಕೆ ಸಂಬಂಧಪಟ್ಟ ಅಂಶಗಳು ಹೊರಬರುವಂತೆ ಎಚ್ಚರಿಕೆ ವಹಿಸಬೇಕು |

| | | |
|---|---|---|
| 12.00–12.30 | **ಸ್ಥಳೀಯ ಅವಶ್ಯಕತೆಗಳು ಹಾಗು ಬೇಡಿಕೆಗಳನ್ನು ವಲಯವಾರು ವಿಂಗಡಿಸುವುದು** | **ಸ್ಥಳೀಯ ಚಟುವಟಿಕೆ –**<br>ಮೇಲಿನ ಚಟುವಟಿಕೆಯ ಮೂಲಕ ಪಟ್ಟಿ ಮಾಡಲಾದ ಅಂಶಗಳನ್ನು ಪಂಚಾಯತಿ ಸದಸ್ಯರ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ 3 ವಲಯಗಳಲ್ಲಿ ವಿಂಗಡಿಸಬೇಕು |
| 12.30–01.00 | **ಜನಾಂದೋಲನ ಯೋಜನೆ – ವಿಕೇಂದ್ರಿಕರಣದಲ್ಲಿ ಮುನ್ನಡೆ ಸಾಧಿಸಿದ ಕೇರಳದ ಪ್ರಯೋಗ** | ವಿಕೇಂದ್ರಿಕೃತ ಯೋಜನೆ ತಯಾರಿಸುವಲ್ಲಿ ಕೇರಳ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾದ ಜನಾಂದೋಲನದ ಯೋಜನೆಯ ಪ್ರಮುಖ ಅಂಶಗಳು – ಉಪಗ್ರಹ ಪ್ರಸಾರದ ಮೂಲಕ ವಿಷಯ ಮಂಡನೆ (ಕಕಖಿ) |
| 01.00–01.30 | **ಪ್ರಶ್ನೋತ್ತರ ಕಾರ್ಯಕ್ರಮ** | ಉಪಗ್ರಹ ಪ್ರಸರಣ |
| 01.30–02.30 | **ಊಟದ ವಿರಾಮ** | |
| 02.30–03.00 | **ಅಂಗೈಯಲ್ಲಿ ಅರಮನೆ – ಕಿರುಚಿತ್ರ ಪ್ರಸರಣ** | ಉಪಗ್ರಹ ಪ್ರಸರಣ |
| 03.00–03.15 | ತ್ವರಿತ ಪ್ರತಿಕ್ರಿಯೆ | ಸ್ಥಳೀಯ ಚಟುವಟಿಕೆ |
| 03.15–03.45 | **ಸಂಪನ್ಮೂಲ ನಕ್ಷೆ ಬಿಡಿಸುವುದು** | **ಸ್ಥಳೀಯ ಚಟುವಟಿಕೆ –**<br>ವಿಂಗಡಿಸಲಾದ ವಲಯಗಳ ಪೈಕಿ ಯಾವುದಾದರೊಂದು ಕ್ಷೇತ್ರದ (ಉದಾ:1. ಕುಡಿಯುವ ನೀರು, 2. ಪ್ರಾಥಮಿಕ ಶಿಕ್ಷಣ 3. ಗ್ರಾಮೀಣ ವಸತಿ 4. ಹೈನುಗಾರಿಕೆ 5. ನೈರ್ಮಲ್ಯ ಇತ್ಯಾದಿ) ಸಂಪನ್ಮೂಲ ನಕ್ಷೆಯನ್ನು ಪಂಚಾಯತಿವಾರು ಗುಂಪುಗಳಲ್ಲಿ ಸದಸ್ಯರು ಬಿಡಿಸಬೇಕು. ಈ ಚಟುವಟಿಕೆಯನ್ನು ನಡೆಸಲು ಸಂಪನ್ಮೂಲ ವ್ಯಕ್ತಿಗಳು ನಡೆಸಬೇಕು. ಈ ನಕ್ಷೆಯನ್ನು ಬಿಡಿಸುವ ಸಂಧರ್ಭದಲ್ಲಿ ಆ ಕ್ಷೇತ್ರಕ್ಕೆ ಸಂಬಂಧಪಟ್ಟು ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಸಕ್ತ ಇರುವ ವಾಸ್ತವಿಕ ಸೌಲಭ್ಯಗಳನ್ನು ಮೊದಲು ಗುರುತಿಸಿ ಆ ಕ್ಷೇತ್ರದ ಸಮಸ್ಯೆಗಳನ್ನು ಮತ್ತು ಬೇಡಿಕೆಗಳನ್ನು ಬೇರೆ ಬಣ್ಣದಲ್ಲಿ ಚಿತ್ರಿಸಲು ಸಾಧ್ಯವಾಗಬೇಕು. |
| 03.45–04.15 | **ಪಂಚವಾರ್ಷಿಕ ಯೋಜನೆ ಸಿದ್ಧಪಡಿಸುವುದು** | **ಸ್ಥಳೀಯ ಚಟುವಟಿಕೆ :**<br>▪ ಸದಸ್ಯರು ನಕ್ಷೆ ಬಿಡಿಸಿದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಿಂದಿನ ಚಟುವಟಿಕೆಯಲ್ಲಿ ಗುರುತಿಸಲಾದ ಸಮಸ್ಯೆಗಳು, ಅವಶ್ಯಕತೆಗಳು ಹಾಗು ಬೇಡಿಕೆಗಳನ್ನು ಆಧರಿಸಿ ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಬೇಕು.<br>▪ ಈ ಕೆಳಗಿನ ಅಂಶಗಳ ಅನ್ವಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವುದು<br>1. ಅವಶ್ಯಕ ಸೌಲಭ್ಯ ಅಥವಾ ಕಾಮಗಾರಿ<br>2. ಯೋಜನಾ ವೆಚ್ಚ<br>3. ಅನುದಾನದ ಮೂಲ<br>4. ಕಾಲಮಿತಿ |
| 04.15–04.30 | **ಟೀ ವಿರಾಮ** | |
| 04.30–05.30 | **ಪ್ರಶ್ನೋತ್ತರ ಕಾರ್ಯಕ್ರಮ** | ಉಪಗ್ರಹ ಪ್ರಸರಣ |

## 6) ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ವಿನ್ಯಾಸದ ಪುನರ್ರಚನೆಯ ಕುರಿತು ಉಪಗ್ರಹ ಆಧಾರಿತ ಕಾರ್ಯಕ್ರಮದ ಮೂಲಕ ಮನವರಿಕೆ :

ಅಭಿವೃದ್ಧಿ ಮುನ್ನೋಟ ತಯಾರಿಕೆಗೆ ಸಂಬಂಧಿಸಿದಂತೆ ತರಬೇತಿ ವಿನ್ಯಾಸದ ಕುರಿತು ನಡೆಸಿದ ಕ್ಷೇತ್ರ ಪ್ರಯೋಗದಲ್ಲಿ ಒಟ್ಟು 350 ಸಂಪನ್ಮೂಲ ವ್ಯಕ್ತಿಗಳಲ್ಲಿ ಕೇವಲ 8 ಸಂಪನ್ಮೂಲ ವ್ಯಕ್ತಿಗಳು ಮಾತ್ರ ಭಾಗವಹಿಸಿದ್ದರು. ಬದಲಾವಣೆಯಾದ ತರಬೇತಿ ವಿನ್ಯಾಸ ಹಾಗು ಅಳವಡಿಸಬೇಕಾದ ವಿಧಾನ ಕೇವಲ 8 ಸಂಪನ್ಮೂಲ ವ್ಯಕ್ತಿಗಳಿಗೆ ಮಾತ್ರ ತಿಳಿದಿದ್ದು, ಉಳಿದ ಸಂಪನ್ಮೂಲ ವ್ಯಕ್ತಿಗಳಿಗೆ ಮನದಟ್ಟು ಮಾಡುವ ಅವಶ್ಯಕತೆಯಿತ್ತು. ಈ ಕ್ಷೇತ್ರ ಅಧ್ಯಯನದಲ್ಲಿ ಭಾಗವಹಿಸಿದ್ದ ಸಂಪನ್ಮೂಲ ವ್ಯಕ್ತಿಗಳು ಗ್ರಾಮ ಪಂಚಾಯತಿ ಸದಸ್ಯರಿಗೆ ನಡೆಸಿದ 7ನೇ ಪ್ರಸರಣದ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮದಲ್ಲಿ ತಾವು ಪಡೆದ ಅನುಭವದ ಪ್ರಯೋಗ ನಡೆಸಿ ಅದರ ಸಫಲತೆ ಕುರಿತು ಆತ್ಮ ವಿಶ್ವಾಸ ವ್ಯಕ್ತ ಪಡಿಸಿದ್ದರಿಂದ ಉಳಿದ ಸಂಪನ್ಮೂಲ ವ್ಯಕ್ತಿಗಳಿಗೆ ಮಾಹಿತಿ ನೀಡುವ ಕ್ರಮ ಕೈಗೊಳ್ಳಬೇಕಿತ್ತು.

ತರಬೇತಿಯನ್ನು ಮುಖಾಮುಖಿ ತರಬೇತಿ ನಡೆಸುವುದಕ್ಕಿಂತ ಉಪಗ್ರಹ ಆಧಾರಿತ ನೆರವಿನಿಂದ ನಡೆಸುವುದರಿಂದ ಸಮಯ ಹಾಗು ವೆಚ್ಚದ ಉಳಿತಾಯವಾಗುವುದಲ್ಲದೇ ಸಮರ್ಥವಾಗಿ ನಡೆಸಬಹುದೆಂದು ಕಂಡುಕೊಂಡ ಕಾರಣದಿಂದ ಉಪಗ್ರಹ ಆಧಾರಿತ ವ್ಯವಸ್ಥೆಯನ್ನೇ ಬಳಸುವುದೆಂದು ತೀರ್ಮಾನಿಸಲಾಯಿತು. ಅಲ್ಲದೇ, ಎರಡನೇ ಹಂತದ ತರಬೇತಿ ವಿನ್ಯಾಸದಲ್ಲಿ ತಂದ ಸಮಗ್ರ ಬದಲಾವಣೆಯೊಂದಿಗೆ ಇಡೀ ಕಾರ್ಯಕ್ರಮದ ಅನುಷ್ಠಾನದಲ್ಲಿ ಕಂಡು ಬಂದ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕಾದ್ದರಿಂದ ಒಂದು ದಿನದ ಪರಿಶೀಲನಾ ಸಭೆಯನ್ನು ಸಹ ನಡೆಸಲು ಕ್ರಮ ಕೈಗೊಳ್ಳಲಾಯಿತು. ಈ ತರಬೇತಿ ಕಾರ್ಯಕ್ರಮದಲ್ಲಿ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಹಾಗು ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗು ಸಿಬ್ಬಂದಿ ಮತ್ತು ಜಿಲ್ಲಾ ನೋಡೆಲ್ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು.

ದಿ॥ 27.10.05ರ ಉಪಗ್ರಹ ಆಧಾರಿತ ಪರಿಶೀಲನಾ ಸಭೆಯಲ್ಲಿ ಬೆಳಗಿನ ಅಧಿವೇಶನವನ್ನು ತರಬೇತಿ ವಿನ್ಯಾಸದ ಬದಲಾವಣೆಯನ್ನು ಚರ್ಚಿಸಲು ಹಾಗು ಮಧ್ಯಾಹ್ನದ ಅಧಿವೇಶನವನ್ನು ಗ್ರಾಮ ಪಂಚಾಯತಿ ಸದಸ್ಯರ ತರಬೇತಿ ಕಾರ್ಯಕ್ರಮದ ಅನುಷ್ಟಾನದಲ್ಲಿ ಕಂಡು ಬಂದಿರುವ ಸಮಸ್ಯೆಗಳ ಪರಿಹಾರಕ್ಕೆ ಕೈಗೊಂಡ ಕ್ರಮಗಳ ಕುರಿತಾದ ಚರ್ಚೆಗೆ ಮೀಸಲಿಡಲಾಗಿತ್ತು. ಅಭಿವೃದ್ಧಿ ಮುನ್ನೋಟ ತಯಾರಿಕೆ ಕಾರ್ಯಕ್ರಮದ ಕುರಿತು ಸಂಪನ್ಮೂಲ ವ್ಯಕ್ತಿಗಳಿಗೆ ನೀಡಿದ ಮಾಹಿತಿಯ ವಿವರಣೆ ಈ ರೀತಿ ಇದೆ.

| ಸಮಯ | ವೇಳಾಪಟ್ಟಿ |
|---|---|
| 11.15 – 12.30 | ಗ್ರಾಮ ಪಂಚಾಯತಿ ಸದಸ್ಯರ ವಿಸ್ತೃತ ತರಬೇತಿ ವಿನ್ಯಾಸದ **ಎರಡನೇ ದಿನದ** ವೇಳಾಪಟ್ಟಿಯ ಕುರಿತು ಮಾಹಿತಿ<br>▪ ತರಬೇತಿ ವಿನ್ಯಾಸದ ಬದಲಾವಣೆ ಕುರಿತು ಮಾಹಿತಿ<br>▪ ಅಭಿವೃದ್ಧಿ ಮುನ್ನೋಟ ತಯಾರಿಕೆ ಕಾರ್ಯಕ್ರಮದ ಕುರಿತು ತರಬೇತಿ ವಿನ್ಯಾಸದಲ್ಲಿ ಅಳವಡಿಸಿದ ಬದಲಾವಣೆ ಕುರಿತು ವಿವರಣೆ<br>▪ ಗುಲ್ಬರ್ಗ ಜಿಲ್ಲೆಯಲ್ಲಿ ನಡೆದ ಪಂಚವಾರ್ಷಿಕ ಯೋಜನೆ ತಯಾರಿಕೆ ಪ್ರಕ್ರಿಯೆಯ ಪ್ರಾಯೋಗಿಕ ಅನುಭವದ ಹಂಚಿಕೆ<br>▪ ಈ ಪ್ರಾಯೋಗಿಕ ಅನುಭವ ಪಡೆದ ಸಂಪನ್ಮೂಲ ವ್ಯಕ್ತಿಗಳಿಂದ ದೂರವಾಣಿ ಮೂಲಕ ಅನುಭವ ಹಂಚಿಕೆ |
| 12.30 – 01.00 | ಎರಡನೇ ದಿನದ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ **ಪ್ರಶ್ನೋತ್ತರ ಅವಧಿ** |

## 7) ಪುನರ್ರಚಿಸಿದ ತರಬೇತಿ ವಿನ್ಯಾಸದ ಉಪಯುಕ್ತತೆ :

ಅಭಿವೃದ್ಧಿ ಮುನ್ನೋಟ ತಯಾರಿಕೆ ಉಪಯುಕ್ತತೆ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಹಾಗು ಗ್ರಾಮ ಪಂಚಾಯತ್ ಸದಸ್ಯರಿಂದ ಪಡೆದ ಮಾಹಿತಿಯನ್ವಯ ಈ ವಿನ್ಯಾಸವು ಕಾರ್ಯಕ್ರಮದ ಉದ್ದೇಶ ಮನವರಿಕೆ ಮಾಡುವಲ್ಲಿ ಸಫಲವಾಗಿದೆ. ಈ ಕೆಳಕಂಡ ಮಾಹಿತಿಯಿಂದ ಉಪಯುಕ್ತತೆಯನ್ನು ಅಂದಾಜಿಸಬಹುದಾಗಿದೆ.

- ಅಭಿವೃದ್ಧಿ ಮುನ್ನೋಟ ತಯಾರಿಕೆಗೆ ಸಂಬಂಧಿಸಿದಂತೆ, ಪ್ರಾರಂಭದಲ್ಲಿ ಸದಸ್ಯರೊಂದಿಗೆ 30 ನಿಮಿಷಗಳ ಕಾಲ ನಡೆಸಬೇಕಾದ ಗುಂಪು ಚಟುವಟಿಕೆಗೆ ಸಂಬಂಧಿಸಿದಂತೆ, ಚರ್ಚಿಸಬೇಕಾದ ವಿಷಯಗಳು ಹಾಗು ಇಡೀ ಪ್ರಕ್ರಿಯೆಯಲ್ಲಿ ಪ್ರತಿ ಚಟುವಟಿಕೆಯಲ್ಲಿ ಸದಸ್ಯರಿಗೆ ಮನದಟ್ಟು ಮಾಡಿಕೊಡಬೇಕಾದ ಅಂಶಗಳ ಕುರಿತು 4 ಪುಟಗಳ ಟಿಪ್ಪಣಿಯನ್ನು ಸಿದ್ಧಪಡಿಸಿ ಕಳುಹಿಸಲಾಗಿತ್ತು ಇದು ಚಟುವಟಿಕೆಯನ್ನು ನಡೆಸುವ ಕುರಿತು ಉಪಗ್ರಹ ಆಧಾರಿತ ಕಾರ್ಯಕ್ರಮದಲ್ಲಿ ಪಡೆದ ಅನುಭವದೊಂದಿಗೆ ಪೂರಕ ಮಾಹಿತಿ ಒದಗಿಸಿದ ಕಾರಣ ಇಡೀ ಪ್ರಕ್ರಿಯೆಯನ್ನು ಉತ್ತಮ ರೀತಿಯಲ್ಲಿ ನಡೆಸಲು ಸಾಧ್ಯವಾಗಿದೆಯೆಂಬ ಅಂಶ ಸಂಪನ್ಮೂಲ ವ್ಯಕ್ತಿಗಳಿಂದ ವ್ಯಕ್ತವಾಗಿದೆ.

- ಹಿಂದಿನ ವಿನ್ಯಾಸಕ್ಕೆ ಹೋಲಿಸಿದರೆ, ಈಗಿನ ವಿನ್ಯಾಸ ಸರಳವಾಗಿರುವುದರಿಂದ ಚಟುವಟಿಕೆಯನ್ನು ಅರ್ಥಪೂರ್ಣವಾಗಿ ನಡೆಸಬಹುದಾಗಿದೆಯೆಂಬ ಅಭಿಪ್ರಾಯ ಹೊಂದಿದ್ದಾರೆ.

- ಸಂಸ್ಥೆಯಿಂದ ತರಬೇತಿ ನಡೆಯುತ್ತಿರುವ ಕೇಂದ್ರಗಳಿಗೆ ಭೇಟಿ ನೀಡಿದಾಗ ಚಟುವಟಿಕೆಯನ್ನು ಆಸಕ್ತಿಯಿಂದ ನಡೆಸುತ್ತಿರುವುದನ್ನು ಹಾಗು ಸದಸ್ಯರು ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಗಮನಿಸಲಾಗಿದೆ.

- ಗ್ರಾಮ ಪಂಚಾಯತಿ ಸದಸ್ಯರ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯರು ಕೇಳುತ್ತಿರುವ ಪ್ರಶ್ನೆಗಳಲ್ಲಿ ಸಾಕಷ್ಟು ಸುಧಾರಣೆಯಾಗಿರುವುದನ್ನು ಗಮನಿಸಲಾಗಿದೆ. ಸದಸ್ಯರಿಂದ ಪಡೆದ ಪ್ರಶ್ನೆಗಳು ಈ ಕೆಳಕಂಡಂತಿದೆ.

  1. ಯೋಜನೆ ತಯಾರಿಸಲು ಜನ ಸಹಭಾಗಿತ್ವ ಪಡೆಯುವುದು ಹೇಗೆ?
  2. ಜಿಲ್ಲಾ/ ತಾಲ್ಲೂಕು ಪಂಚಾಯತ್‌ಗಳು ನಿರ್ವಹಿಸಬೇಕಾದ ಕಾಮಗಾರಿಗಳಿಗೆ ಅನುದಾನ ಪಡೆಯುವುದು ಹೇಗೆ?
  3. ಎಂ.ಎಲ್.ಎ/ ಎಂ.ಪಿ ಅನುದಾನವನ್ನು ಗ್ರಾಮ ಪಂಚಾಯತಿಗೆ ಏಕೆ ಕೊಡಬಾರದು?
  4. ಐದು ವರ್ಷಗಳಿಗೆ ಏನೇನು ಕಾರ್ಯಕ್ರಮ ಬೇಕಾಗುತ್ತದೆ ಎಂಬುದನ್ನು ನಾವು ಪಟ್ಟಿ ಮಾಡಿದ್ದೇವೆ. ಆದರೆ, ಈ ಎಲ್ಲಾ ಕಾರ್ಯಕ್ರಮಗಳಿಗೆ ಅನುದಾನ ಬಿಡುಗಡೆಯಾಗುತ್ತದೆಯೇ?
  5. ಜಿಲ್ಲಾ/ ತಾಲ್ಲೂಕು ಪಂಚಾಯತಿಗಳ ಕ್ರಿಯಾ ಯೋಜನೆಯನ್ನು ಮಾಡುವಾಗ ಗ್ರಾಮ ಸಭೆಯ ಬೇಡಿಕೆ ದೃಷ್ಠಿಯಿಂದ ಆದ್ಯತೆ ಕೊಡಬೇಕೆಂದು ಕಡ್ಡಾಯ ಮಾಡಬೇಕು
  6. ಗ್ರಾಮ ಪಂಚಾಯತಿಗಳಿಗೆ ಅನಿರ್ಭಂದಿತ ಅನುದಾನವನ್ನು ಹೆಚ್ಚಿಗೆ ಬಿಡುಗಡೆ ಮಾಡಿದಾಗ ಜನಗಳಿಗೆ ಅನುಕೂಲವಾದ ಯೋಜನೆ ತಯಾರಿಸಲು ಅನುವಾಗುತ್ತದೆ.
  7. ಕೇರಳ ಮಾದರಿಯಲ್ಲಿ ಯೋಜನೆ ತಯಾರಿಸಲು ಸ್ವಯಂ ಸೇವಾಸಂಸ್ಥೆ ಬೆಂಬಲವಾಗಿ ಇರುವಂತೆ ನಮಗೂ ಸಹ ಯೋಜನೆ ತಯಾರಿಸಲು ತಜ್ಞರ ಬೆಂಬಲ ಬೇಕು.
  8. ಜಿಲ್ಲಾ ಯೋಜನಾ ಸಮಿತಿ ಕ್ರಿಯಾಶೀಲವಾಗುವಂತೆ ಕ್ರಮ ಕೈಗೊಳ್ಳಬೇಕು
  9. ಪಂಚ ವಾರ್ಷಿಕ ಯೊಜನೆ ಸಿದ್ಧಪಡಿಸುವ ಕುರಿತು ಪಂಚಾಯತಿ ಕಾರ್ಯದರ್ಶಿಗಳಿಗೆ ಹಾಗು ಜಮಾಬಂದಿ ಅಧಿಕಾರಿಗಳಿಗೆ ತರಬೇತಿ ನೀಡಬೇಕು.

## 8) ಉಪಸಂಹಾರ :

ತರಬೇತಿಗೆ ಹೊಸ ವಿಷಯವನ್ನು ಅಳವಡಿಸಿಕೊಳ್ಳುವುದಕ್ಕೆ ಪೂರಕವಾಗಿ ಈ ಕ್ಷೇತ್ರಕಾರ್ಯ ಅಧ್ಯಯನ ನಡೆಸಲಾಗಿದೆ. ಹೀಗೆ ಮಾಡುವುದರಿಂದ ತರಬೇತಿ ಚಟುವಟಿಕೆ ಕೇವಲ ತರಬೇತಿಗೆ ಸೀಮಿತವಾಗದೆ ಕಾರ್ಯಸಾಧುವಾದ ಒಂದು ಪ್ರಯೋಗವಾಗಲು ಸಾಧ್ಯ ಎನ್ನುವುದು ಈ ಅಧ್ಯಯನದಿಂದ ವ್ಯಕ್ತವಾಗಿದೆ. ಪಂಚ ವಾರ್ಷಿಕ ಯೋಜನೆ ಅಥವಾ ಅಭಿವೃದ್ಧಿ ಮುನ್ನೋಟ

ಸಿದ್ಧಪಡಿಸುವಂತಹ ಜವಾಬ್ದಾರಿ ಪಂಚಾಯತ್ ರಾಜ್ ಸಂಸ್ಥೆಗಳ ಮೇಲಿರುವ ಹೊಣೆಗಾರಿಕೆಯಾದರೂ, ಆ ಸಂಸ್ಥೆಗಳು ಆ ಜವಾಬ್ದಾರಿಯನ್ನು ಹೊರಲು ಪೂರ್ವ ಸಿದ್ಧತೆ ಮಾಡಿಕೊಂಡಿಲ್ಲವೆಂಬುದು ಅಧ್ಯಯನದ ಸಂದರ್ಭದಲ್ಲಿ ವಿಶೇಷವಾಗಿ ಅರಿವಿಗೆ ಬಂದ ವಿಷಯವಾಗಿದೆ.

ಒಟ್ಟಾರೆಯಾಗಿ ಅಭಿವೃದ್ಧಿ ಮುನ್ನೋಟವನ್ನು ಸಿದ್ಧಪಡಿಸುವ ಪ್ರಕ್ರಿಯೆ ಪರಿಣಾಮಕಾರಿಯಾಗಿ ನಡೆಯಬೇಕಾದರೆ, ಅದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಬೇಕಿದೆ. ಇದರ ಭಾಗವಾಗಿ ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿ ಹಾಗು ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವ ಸುಸ್ಥಿರವಾದ ಪ್ರಯತ್ನ ಇನ್ನು ಮುಂದೆ ನಡೆಯುವುದು ಅಗತ್ಯ.